ಜನಪದ ಸೇವಾ ಟ್ರಸ್ಟ್ ಪ್ರಕಟಣೆ
ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ ೪ ಮಾರ್ಚ-೨೦೦೪ ಸಂಚಿಕೆ ೮



ತತ್ವರಹಿತ ಪಕ್ಷಗಳಿಗೆ ಅದೆಂಥ ಮತದಾನ?

-ಸುರೇಂದ್ರ ಕೌಲಗಿ

ಮಾನವ ಜೀವನದ ಸಂತೋಷ

-ಡಾ|| ಎ. ಪಿ. ಜೆ. ಅಬ್ದುಲ್‌ಕಲಾಂ

ಸಹಸ್ರಕ್ಕೊಬ್ಬ ಚಲಂ

-ಚಿದಾನಂದ ಸಾಲಿ ಸಿರಿವಾರ

* ಈ ಸಂಚಿಕೆಯಲ್ಲಿ *



ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಮಾರ್ಚ-೨೦೦೪

ಸಂಪುಟ ೪

ಸಂಚಿಕೆ ೮

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೫೪

e-mail - janapada@yahoo.com

ಎದೆಯ ಒಕ್ಕಲಿಗ

ಬೆದೆಯರಿತು ಹದಮಾಡು ಹೃದಯದೀ ಹೊಲವನ್ನು
ಹದ ಬೆದೆಯನರಿತಂಥ ಹೃದಯವಾಸೀ ॥ಪ॥

ಗರುವ ಗ್ರಹಿಕೆಗಳೆಂಬ ಹುಲ್ಲುಕರಿಕೆಗಳಿಂದ
ಸರವವೂ ಕೆಟ್ಟಿಹುದು ನೆಟ್ಟು ಬೆಳೆದು
ಬರುವ ಸುಗ್ಗಿಯ ಬೆಳೆಯು ಭರದಿಂದ ಬರುವಂತೆ
ಗುರುವೆ! ಮಾಡೊ! ಕಲ್ಪತರುವೆ! ಮಾಡೋ

ಕಾಡಿನಂದದಿ ಕರಲು-ಕಲ್ಲಿನಂದದಿ ಎದೆಯು
ಕಾಡುವದು ಕಾಣದೇ ಹಗಲು ಇರುಳೂ
ಮಾಡಿದ್ದ ಬೇಸಾಯ ಮಣ್ಣುಗೂಡುವದಯ್ಯೊ
ಮಾಡ ಬೇಕಿನ್ನೇನು ಕೈ ಸಾಗದಯ್ಯಾ

ಕೋರಪಾಲಿನ ಮಾತು ಮಾಡಿಕೊಟ್ಟೆನು ನಿನಗೆ
ಯಾರೇಕೆ ಮಧ್ಯಸ್ಥರಿಲ್ಲಿ ಬೇಕು?
ಪಾರು ಮಾಡೈ ಹೊಟ್ಟೆಗಿಲ್ಲದೇ ಸಾಯುವೆನು
ತೋರು ಕರುಣದ ಕಸಬು ಎದೆಯ ಒಕ್ಕಲಿಗಾ.

-ಅಂಬಿಕಾತನಯದತ್ತ.

ವಿಚಾರ ದೀಪ್ತಿ

ನನ್ನ ಪಾದಯಾತ್ರೆಯ ಸಂದರ್ಭದಲ್ಲಿ ಒಂದು ಸ್ಥಳದಲ್ಲಿ ಗೋಹತ್ಯೆ ಮಾಡಲಾಗಿತ್ತು. ಆ ಸ್ಥಳದಲ್ಲಿ ಮನಸ್ತಾಪ ಉಂಟಾಗಿತ್ತು. ನಾನು ಅಲ್ಲಿಗೆ ಹೋದೆ. ಆ ದಿನ ಶುಕ್ರವಾರ ಮಸೀದಿಯಲ್ಲಿ ೧೫-೨೦ ಹಳ್ಳಿಗಳ ಜನರು ಸೇರಿದ್ದರು.ನಾನು ಮಸೀದಿಯಲ್ಲೇ ಸಭೆ ನಡೆಸಿದೆ. ಒಂದು ವೇಳೆ ಅಲ್ಲಾಹನಿಗೆ ಗೋ-ಕುರಿಗಳ ಬಲಿದಾನದಿಂದಲೇ ಸಂತೋಷ ಉಂಟಾಗುತ್ತಿದ್ದರೆ ಅವನು ಪೈಗಂಬರನನ್ನೇಕೆ ಕಳುಹಿಸುತ್ತಿದ್ದನೆಂದು ಕೇಳಿದೆ. ಆಗ ಕೇವಲ ಕಸಾಯಿ ಒಂದೇ ಸಾಕಾಗಿತ್ತು. ಅಲ್ಲಾ ಪ್ರೇಮಕ್ಕಾಗಿ ಹಸಿದಿದ್ದಾನೆ, ಬಲಿದಾನಕ್ಕಾಗಿ ಅಲ್ಲ ಎಂದು ಕುರಾನಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಇಸಾಯಿ ಮತ್ತು ಇಸ್ಲಾಂ ಧರ್ಮಗಳಲ್ಲಿ ಗೋ ಬಲಿ ಕೊಡಬೇಕೆಂಬ ಯಾವ ಮಾತೂ ಇಲ್ಲವೆಂದು ಈ ಎರಡೂ ಧರ್ಮಗಳ ಪ್ರತಿನಿಧಿಯಾಗಿ ಈ ಮಾತನ್ನು ಹೇಳಬಲ್ಲೆ. ಹಿಂದೂ ಧರ್ಮದಲ್ಲಿ ಹೇಳಿರುವಂತೆ ಈ ಧರ್ಮಗಳಲ್ಲಿ ಕೂಡ ಬಲಿ ಕೊಡುವ ಮಾತನ್ನು ಹೇಳಲಾಗಿದೆ. ಆದರೆ ಗೋವನ್ನೇ ಬಲಿಕೊಡಬೇಕೆಂಬ ಮಾತು ಇಲ್ಲ. ಗೋ ಹತ್ಯೆ ಮಾಡಕೂಡದೆಂದು ಹದಿಸ್ ಎಂಬ ಇಸ್ಲಾಂ ಗ್ರಂಥದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಗೋವಿಗೆ ನಾವು ಉಪಕೃತರಾಗಿರಬೇಕು. ಹದಿಸ್‌ನಲ್ಲಿ ಇದ್ನೆ ಮಸೂದ್ ಪ್ರಕಾರ ಗೋ ಹಾಲನ್ನು ಅಗತ್ಯವಾಗಿ ಕುಡಿಯಬೇಕೆಂಬ ಪೈಗಂಬರ್‌ನ ಆಜ್ಞೆ ಇದೆ. ಏಕೆಂದರೆ ಅದರಲ್ಲಿ ಎಲ್ಲ ವನಸ್ಪತಿಗಳ ಸತ್ವವಿದೆ. ಗೋ ಹಾಲಂತೂ ಔಷಧವಾಗಿದೆ ಮತ್ತು ಅದರ ತುಪ್ಪ ರೋಗದಿಂದ ಮುಕ್ತಮಾಡುತ್ತದೆ. ಗೋ ಮಾಂಸದಿಂದ ದೂರವಿರಿ ಏಕೆಂದರೆ ಅದರ ಮಾಂಸ ರೋಗವನ್ನುಂಟು ಮಾಡುತ್ತದೆ ಹದಿಸ್‌ನಲ್ಲಿ ಇದನ್ನು ಬಹಳ ಸ್ಪಷ್ಟವಾಗಿ ಹೇಳಲಾಗಿದೆ.

ನಿಮ್ಮ ನೆರೆಯವರ ಭಾವನೆಗಳ ಬಗ್ಗೆ ಗಮನವಿರಲೆಂದು ಇಸ್ಲಾಂನಲ್ಲಿ ಆಜ್ಞೆಯಿದೆ. ಆದ್ದರಿಂದ ಗೋಹತ್ಯೆಯನ್ನು ಮುಸಲ್ಮಾನರು ವಿರೋಧ ಮಾಡುತ್ತಾರೆಂದು ತಿಳಿಯುವುದು ತಪ್ಪು. ಈ ಮಾತನ್ನು ಪ್ರೇಮಪೂರ್ವಕವಾಗಿ ತಿಳಿಸುವ ಅಗತ್ಯವಿದೆ.

–ವಿನೋಬಾ

ತತ್ವರಹಿತ ಪಕ್ಷಗಳಿಗೆ ಅದೆಂಥ ಮತದಾನ?

-ಸುರೇಂದ್ರ ಕೌಲಗಿ

ಮಹಾತ್ಮ ಗಾಂಧೀಜೀಯವರು ಏಳು ಪ್ರಕಾರದ ಸಾಮಾಜಿಕ ಪಾತಕಗಳನ್ನು ಗುರ್ತಿಸಿದ್ದರು. ಅವುಗಳಲ್ಲಿ ಪ್ರಮುಖವಾದ ಒಂದು ಪಾತಕ ತತ್ವರಹಿತ ರಾಜಕಾರಣ. ನಮ್ಮ ದೇಶದಲ್ಲಿ ಇದುವರೆಗೆ ಲೋಕಸಭೆಗೆ ೧೩ ಚುನಾವಣೆಗಳು ನಡೆದಿವೆ. ಈ ಚುನಾವಣೆಗಳಲ್ಲದೆ ದೇಶದ ವಿವಿಧ ರಾಜ್ಯಗಳಲ್ಲಿ ಆಯಾ ರಾಜ್ಯಗಳ ವಿಧಾನ ಸಭೆಗಳಿಗೆ ಚುನಾವಣೆಗಳು ನಡೆದಿವೆ. ಈ ಎಲ್ಲಾ ಚುನಾವಣೆಗಳಲ್ಲಿ ಪ್ರಜಾಪ್ರಭುತ್ವದ ಸಂಕೇತವಾಗಿರುವ ರಾಜಕೀಯ ಪಕ್ಷಗಳು ಪೈಪೋಟಿಯೊಂದಿಗೆ ಭಾಗವಹಿಸಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಮತ್ತು ಗಣರಾಜ್ಯದ ಸ್ಥಾಪನೆಯಾದ ಮೇಲೆ ದೇಶದ ನಿರ್ಮಾಣ ಕಾರ್ಯದಲ್ಲಿ ರಾಜಕೀಯ ಪಕ್ಷಗಳ ಪಾತ್ರ ಕಾಲ ಕಳೆದಂತೆ ಹೆಚ್ಚುಹೆಚ್ಚು ಮಹತ್ವವನ್ನು ಪಡೆಯುತ್ತಿದೆ. ಇದುವರೆಗೆ ನಡೆದ ಚುನಾವಣೆಗಳ ಕಾರಣದಿಂದಾಗಿ ರಾಷ್ಟ್ರಿಕ ಮತ್ತು ಮತದಾರ ಎಂಬ ಭೇದವೇ ಅಳಿದುಹೋಗಿದೆ ಎಂಬಷ್ಟರ ಮಟ್ಟಿಗೆ ಚುನಾವಣೆಗಳ ಪ್ರಭಾವ ನಮ್ಮ ರಾಷ್ಟ್ರಜೀವನದ ಮೇಲೆ ಉಂಟಾಗಿದೆ. ಇಂತಹ ಹಿನ್ನಲೆಯೊಂದಿಗೆ ೨೦೦೪ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕರ್ನಾಟಕವೂ ಸೇರಿದಂತೆ ನಾಲ್ಕು ರಾಜ್ಯಗಳ ವಿಧಾನ ಸಭೆಗೆ ಮತ್ತು ಲೋಕಸಭೆಗೆ ಮಹಾಚುನಾವಣೆ ನಡೆಯಲಿದೆ. ಈ ಚುನಾವಣೆಯು ಅವಧಿಗೆ ಮುನ್ನವೇ ನಡೆಯುತ್ತಿರುವುದು ತತ್ವರಹಿತ ರಾಜಕಾರಣ ಒಂದು ಪಾತಕವೆಂದು ಹೇಳಿದಗಾಂಧೀಜೀಯವರ ಮಾತನ್ನು ಪುಷ್ಠೀಕರಿಸುತ್ತದೆ. ಅಲ್ಲದೆ, ದೇಶದ ಭವಿಷ್ಯವನ್ನು ಬರೆಯಬೇಕಾಗಿರುವ ಮತದಾರ ಈ ತತ್ವರಹಿತ ಪಕ್ಷಗಳ ಕೈಗೊಂಬೆಯಾಗಿದ್ದಾನೆಂಬ ಮಾತನ್ನೂ ಸಿದ್ಧ ಪಡಿಸುತ್ತದೆ.

ಐದು ವರ್ಷಗಳಿಗೊಮ್ಮೆ ಚುನಾವಣೆ ನಡೆಯುವ ಮಾತ್ರದಿಂದಲೇ, ಮತದಾರರು ಮತಗಟ್ಟೆಗೆ ಹೋಗಿ ತಮ್ಮ ಮತ ಚಲಾಯಿಸುವುದರಿಂದಲೇ ದೇಶದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಇದೆ ಎಂದು ಹೇಳಲು ಸಾಧ್ಯವಿಲ್ಲ. ಕಳೆದ ೫೩ ವರ್ಷಗಳಿಂದ ಇದುವರೆಗೆ ನಮ್ಮ ದೇಶದಲ್ಲಿ ಸ್ಪಷ್ಟವಾದ ಸಿದ್ಧಾಂತಗಳನ್ನು ಹೊಂದಿರುವ ಒಂದೇ ಒಂದು ರಾಜಕೀಯ ಪಕ್ಷ ಇಲ್ಲದೆ ಇರುವುದು ನಿಜಕ್ಕೂ ವಿಷಾದನೀಯ.

೧೯೯೦ ರಿಂದ ನಮ್ಮ ದೇಶವು ಜಾಗತೀಕರಣ ಮತ್ತು ಮುಕ್ತ ವಾಣಿಜ್ಯೀಕರಣ

ನೀತಿಗೆ ಒಳಗಾದದ್ದರಿಂದ ದೇಶದ ರಾಜಕೀಯ ಪಕ್ಷಗಳು ಇನ್ನೂ ಹೆಚ್ಚು ಸಿದ್ಧಾಂತರಹಿತವಾಗಿಯೆ ಮುಂದುವರೆದು ಕೊಂಡು ಬಂದವು. ಸಮಾಜವಾದದ ನೆಲಗಟ್ಟಿನ ಮೇಲೆ ನಿಂತ ಪಕ್ಷಗಳಂತೂ ಇಲ್ಲವಾದವು. ಅದರ ಬದಲಿಗೆ ಕೋಮುವಾದದ ನೆಲಗಟ್ಟಿನ ಮೇಲೆ ಹಾಗೂ ಬಂಡವಾಳಶಾಹಿ ನೆಲಗಟ್ಟಿನ ಮೇಲೆ ನಿಂತ ಪಕ್ಷಗಳು ದೇಶದ ರಾಜಕೀಯ ವೇದಿಕೆಯ ಮೇಲೆ ಕಾಣಿಸಿಕೊಂಡವು. ಬಂಡವಾಳಶಾಹಿ ತತ್ವದ ಪಕ್ಷಗಳಾಗಲಿ, ಕೋಮುವಾದದ ಪಕ್ಷಗಳಾಗಲಿ ಭಾರತದ ನಿರ್ಮಾಣಕ್ಕೆ ಸೂಕ್ತ ಮಾಧ್ಯಮವಾಗದೆ ಉಳಿದವು. ಇದರಿಂದಾಗಿ ಈಗ ನಡೆಯಲಿರುವ ಚುನಾವಣೆ ಅತ್ಯಂತ ವಿಚಾರಶೂನ್ಯ ಹಾಗೂ ಅತ್ಯಂತ ತತ್ವರಹಿತಚುನಾವಣೆಯಾಗಿದೆ.

ಇನ್ನೂ ಹತ್ತು ತಿಂಗಳು ರಾಜಕೀಯುವಾಗಿ ನಿಶ್ಚಿಂತೆಯಿಂದ ಇರಬಹುದೆಂದು ಮಲಗಿದ್ದ ಮತದಾರನು ತನ್ನ ಮನೆಗೆ ಬೆಂಕಿ ಬಿದ್ದತೆರದಿ ಗಾಬರಿಗೊಂಡು ಏನಾಯಿತೆಂದು ಹೊರಜಗತ್ತನ್ನು ಕಿಟಕಿಯಿಂದ ನೋಡುತ್ತಿದ್ದಾನೆ. ಅಲ್ಲಿ ಹೊರಗೆ ಬೀದಿಯಲ್ಲಿ ಅವನಿಗೆ ಕಾಣುತ್ತಿರುವುದು ರಾಜಕಾರಣಿಗಳ ಪರಸ್ಪರ ಬೈದಾಟ, ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಸದಸ್ಯರ ನೆಗೆದಾಟ, ಅನೇಕ ಆವೇಷಗಳ ಪ್ರದರ್ಶನ! ಸರ್ಕಾರದ ಖಜಾನೆಯಲ್ಲಿ ಹಣ ಇದೆಯೋ ಇಲ್ಲವೋ ಎಂಬುದರ ಪರಿವೆ ಇಲ್ಲದೆ ಕೋಟಿ ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಗಳ ಘೋಷಣೆ!! ಸಮಾಜದ ಪ್ರತಿಯೊಂದು ಸಮುದಾಯಕ್ಕೂ ಒಂದಲ್ಲ ಒಂದು ರೀತಿಯ ಅಭಿವೃದ್ಧಿಯ ರಿಯಾಯಿತಿಆಮಿಷವನ್ನು ತೋರಿಸಲಾಗುತ್ತಿದೆ. ಕಳೆದ ೫ ವರ್ಷಗಳ ಕಾಲದ ಆಳ್ವಿಕೆಯಲ್ಲಿ ಕಾಣದೆ ಇದ್ದ ಸಮಸ್ಯೆಗಳೆಲ್ಲ ಗೋಚರಿಸುತ್ತಿವೆ ಮತ್ತು ಆ ಸಮಸ್ಯೆಗಳಿಗೆ ಧಿಡಿರ್ ಪರಿಹಾರವನ್ನು ಬಹಿರಂಗಗೊಳಿಸಲಾಗುತ್ತಿದೆ. ನೆನೆಗುದಿಗೆ ಬಿದ್ದಿದ್ದ ಎಲ್ಲಾ ಕಾಮಗಾರಿಗಳಿಗೆ ಒಮ್ಮಿಂದೊಮ್ಮೆಲೆ ಚಾಲನೆ ಸಿಕ್ಕಿದೆ. ಮತದಾರನ ಸುತ್ತ ಜಗತ್ತು ವೇಗವಾಗಿ ಸುತ್ತುತ್ತಿದೆ. ಇದೆಲ್ಲ ಸದ್ದುಗದ್ದಲಗಳ ನಡುವೆ ಮತದಾರನ ಧ್ವನಿ ಅಡಗಿಹೋಗಿದೆ. ಈ ಚುನಾವಣೆಯಲ್ಲಿ ಒಂದು ಅಂದಾಜಿನಂತೆ ೨೦೦ಕ್ಕೂ ಹೆಚ್ಚು ರಾಜಕೀಯ ಪಕ್ಷಗಳು ಮತ್ತು ೬,೦೦೦ಕ್ಕೂ ಹೆಚ್ಚು ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ. ೬೭ ಕೋಟಿಗೂ ಹೆಚ್ಚು ಮತದಾರರು ತಮ್ಮ ಮತವನ್ನು ಹಾಕಲಿದ್ದಾರೆ. ಲೋಕಸಭೆಗಾಗಿ ೫೪೩ಕ್ಷೇತ್ರಗಳಲ್ಲಿಯೂ, ವಿಧಾನಸಭೆಗಳಿಗಾಗಿ ೬೦೦ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿಯೂ ಚುನಾವಣೆಗಳು ನಡೆಯಲಿವೆ. ಹೀಗೆ ಭಾರತದ ಪ್ರಜಾಪ್ರಭುತ್ವ ಅಂಕಿ-ಸಂಖ್ಯೆಗಳ ದೃಷ್ಟಿಯಿಂದಲೂ ವಿಶ್ವದಲ್ಲಿಯೇ ಅತ್ಯಂತ ದೊಡ್ಡದಾದುದಾಗಿದೆ. ಆದರೆ ಈ

ಚುನಾವಣೆಯ ಮುಖ್ಯ ಪಾತ್ರಧಾರಿಗಳಾಗಿರುವ ರಾಜಕೀಯ ಪಕ್ಷಗಳಿಗೆ ಯಾವುದೆ ತತ್ವಗಳು, ಸಿದ್ಧಾಂತಗಳು ಇರುವುದಿಲ್ಲ. ಅಧಿಕಾರದಲ್ಲಿದ್ದ ಪಕ್ಷಗಳು ತಮ್ಮ ತಮ್ಮ ಆಡಳಿತಾತ್ಮಕ ಹಾಗೂ ಅಭಿವೃದ್ಧಿ ಪ್ರಧಾನವಾಗಿದ್ದ ಸಾಧನೆಗಳೇ ತಮ್ಮ ಪಕ್ಷದ ಪ್ರಣಾಳಿಕೆ ಎಂದು ಘೋಷಿಸಿವೆ. ತನ್ಮೂಲಕ ತತ್ವಗಳನ್ನು ಮೂಲೆಗೆ ತಳ್ಳಿವೆ. ಪ್ರಾದೇಶಿಕ ಪಕ್ಷಗಳಂತೂ ಸುಯೋಗ್ಯವಾದ ಪ್ರಣಾಳಿಕೆಗಳನ್ನು ತಯಾರಿಸುವುದರಲ್ಲಿ ವಿಫಲಗೊಂಡಿವೆ. ಹೀಗಾಗಿ ದೇಶದ ಎಲ್ಲಾ ರಾಜಕೀಯ ಪಕ್ಷಗಳು ಸೈದ್ಧಾಂತಿಕವಾಗಿ ದಿವಾಳಿ ಎದ್ದಿವೆ. ಪಕ್ಷಗಳ ಸೈದ್ಧಾಂತಿಕ ದಿವಾಳಿಯೂ ಸಹ ಸೇರಿಕೊಂಡು ಈಗ ನಡೆಯಲಿರುವ ಚುನಾವಣೆ ಪ್ರಜಾಪ್ರಭುತ್ವದ ಒಂದು ಅಣಕುನಾಟಕವಾಗಿದೆಯಷ್ಟೆ!

ಇದು ಸಾಲದೆಂಬಂತೆ ರಾಜಕಾರಣದ ಅಪರಾಧೀಕರಣ ಗರಿಷ್ಟ ಮಟ್ಟಕ್ಕೆ ಮುಟ್ಟಿದೆ. ಹಣದ ಬಲ, ಭುಜದ ಬಲ ಚುನಾವಣೆಯಲ್ಲಿಯ ಗೆಲುವಿಗೆ ಕಾರಣಗಳಾಗಿವೆ.

ವೊಹ್ರಾ ಸಮಿತಿಯ ವರದಿಯ ಪ್ರಕಾರ ೧೯೯೭ರಲ್ಲಿ ಲೋಕಸಭೆಯ ೪೦ ಸದಸ್ಯರ ವಿರುದ್ಧ ಮತ್ತು ೭೦೦ ವಿಧಾನಸಭಾಸದಸ್ಯರುಗಳ ವಿವಿಧ ಬಗೆಯ ಅಪರಾಧಗಳಿಗಾಗಿ ಆಪಾದನೆಗಳ ಪಟ್ಟಿಯನ್ನು ಸಲ್ಲಿಸಲಾಗಿತ್ತು. ಈಗ ಇಂತಹವರ ಸಂಖ್ಯೆ ಇನ್ನೂ ಹೆಚ್ಚಾಗಿದೆ.

ಚುನಾವಣಾ ಸಮಯದಲ್ಲಿರುವ ಉಸ್ತುವಾರಿ ಸರ್ಕಾರಗಳು ತಮ್ಮ ತಾತ್ಕಾಲಿಕ ಅಧಿಕಾರವನ್ನು ತಮ್ಮ ತಮ್ಮ ಪಕ್ಷಗಳ ಹಿತಕ್ಕಾಗಿ ಉಪಯೋಗಿಸಿಕೊಳ್ಳುವ ಉದಾಹರಣೆಗಳೇನೂ ಕಡಿಮೆಯಿಲ್ಲ. ಹಿಂದೆ ಒಂದು ಚುನಾವಣೆಯ ಸಮಯದಲ್ಲಿ ಉಸ್ತುವಾರಿ ಸರ್ಕಾರವಾಗಿದ್ದ ಬಿ. ಜೆ. ಪಿ. ಸರ್ಕಾರವು ಆ ಸಮಯದಲ್ಲಿ ನಡೆದ ಕಾರ್ಗಿಲ್ ಯುದ್ಧವನ್ನೇ ತನ್ನ ಗೆಲುವಿಗಾಗಿ ಉಪಯೋಗಿಸಿಕೊಂಡಿತು. ತಮ್ಮ ಪ್ರಾಣವನ್ನುತೆತ್ತು ಅಮರರಾದ ಸೈನಿಕರ ಶವಗಳನ್ನು ಮುಂದಿಟ್ಟು ತನ್ನ ವಿಜಯವನ್ನು ಸಾಧಿಸಿತು.

ಇತ್ತೀಚಿಗಿನ ಉದಾಹರಣೆ ಎಂದರೆ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮತ್ತು ಬಹುಜನ ಸಮಾಜವಾದಿ ಪಕ್ಷದ ನಾಯಕಿ ಮಾಯಾವತಿ ಬಿ.ಜೆ.ಪಿ.ಯೊಂದಿಗೆ ಸ್ನೇಹ ಮಾಡಿಕೊಂಡಿದ್ದಕ್ಕಾಗಿ ಅವರ ವಿರುದ್ಧ ಇದ್ದ ಅನೇಕ ಗೈರ್ ಕಾನೂನಿ ವ್ಯವಹಾರಗಳ ಬಗ್ಗೆತನಿಖೆ ನಡೆಸಲು ಸಿ. ಬಿ.ಐಗೆ ಅನುಮತಿ ಕೊಡಲಿಲ್ಲ. ಅಲ್ಲದೆ ಬಿ.ಜೆ.ಪಿ ತನ್ನ ಸುಳ್ಳು ಹಾಗೂ ಆಧಾರರಹಿತ ಸಾಧನೆಗಳನ್ನು "ಭಾರತ ಪ್ರಕಾಶಿಸುತ್ತಿದೆ" ಎಂಬ ಜಾಹಿರಾತುಗಳ ಮೂಲಕ ಮತದಾರರನ್ನು

ಮೋಸಗೊಳಿಸಿ ಮತ ಪಡೆಯಲು ಪ್ರಯತ್ನಿಸುತ್ತಿದೆ. ಇದೇ ರೀತಿಯ ಮಾರ್ಗವನ್ನು ಪ್ರತಿಯೊಂದು ರಾಜಕೀಯ ಪಕ್ಷಗಳು ಹಿಡಿದಿವೆ.

ರಾಜಕೀಯ ಪಕ್ಷಗಳಲ್ಲಿಯ ತತ್ವರಹಿತ ರಾಜಕಾರಣದಲ್ಲಿ ಭ್ರಷ್ಟತೆ ಇತ್ಯಾದಿಗಳು ನಮ್ಮ ದೇಶದ ಚುನಾವಣೆಯಲ್ಲಿ ನುಸುಳುವ ಮೊದಲೇ ಅಂದರೆ ೯೫ ವರ್ಷಗಳಷ್ಟು ಹಿಂದೆಗಾಂಧೀಜೀಯವರು ತಮ್ಮ ಹಿಂದ್‌ಸ್ವರಾಜ್ ಪುಸ್ತಕದಲ್ಲಿ ಇಂಗ್ಲೆಂಡ್ ಪಾರ್ಲಿಮೆಂಟ್ ಕುರಿತು ಹೇಳಿದ ಮಾತು ನಮ್ಮ ಇಂದಿನ ಲೋಕಸಭೆಗೂ ಅನ್ವಯಿಸುತ್ತದೆ. ಲೋಕಸಭೆ ಕೆಲಸವನ್ನು ಮಾಡುವುದಿಲ್ಲ ಅದು ಬಂಜೆಯಂತೆ. ಪದೇ ಪದೇ ಬದಲಾಗುವ ಪ್ರಧಾನ ಮಂತ್ರಿಗಳೆ ಅದರ ನಾಯಕರು. ಆದ್ದರಿಂದ ಲೋಕಸಭೆ ಒಂದು ವೇಶ್ಯೆಯೇ ಆಗಿದೆ. ಈಗ ಅದರ ನಾಯಕ ವಾಜಪೇಯಿ, ನಾಳೆ ದೇವೇಗೌಡ ಆಗಬಹುದು, ಅಥವಾ ಮತ್ತಾರಾದರೂ ಆಗಬಹುದು! ಲೋಕಸಭೆಯ ಸದಸ್ಯರು ಸ್ವಾರ್ಥಿಗಳು, ಕಪಟಿಗಳು ಆಗಿರುತ್ತಾರೆ ಪ್ರತಿಯೊಬ್ಬ ಸದಸ್ಯನಿಗೂ ತನ್ನ ಕ್ಷುದ್ರ ಸ್ವಾರ್ಥದ ಚಿಂತೆ. ಮಹತ್ತಾದ ಚರ್ಚೆ ನಡೆಯುವಾಗ ಸದಸ್ಯರುತೂಕಡಿಸುತ್ತಿರುತ್ತಾರೆ. ಕೇಳುವವರಿಗೆ ಬೇಸರ ಬರುವಷ್ಟು ಬರಿ ಮಾತೇ ಆಡುತ್ತಾರೆ. ಆದ್ದರಿಂದ ಲೋಕಸಭೆಯನ್ನು ಮಾತಿನ ಅಂಗಡಿ ಎಂದು ಕರೆಯ ಬಹುದು. ಹಿಂದೆ ಗಾಂಧೀಜೀ ಇಂಗ್ಲೆಂಡಿನ ಪಾರ್ಲಿಮೆಂಟಿನ ಬಗ್ಗೆ ಹೇಳಿದ್ದ ಈ ಮಾತುಗಳು ಎಷ್ಟು ನಿಖರವಾಗಿದೆ ಎಂಬುದು ನಮ್ಮ ಲೋಕಸಭೆಯನ್ನು ನೋಡಿದರೆ ಗೊತ್ತಾಗುತ್ತದೆ.

ಇಂತಹ ಅರ್ಥವಿಲ್ಲದ ಲೋಕಸಭೆಗೆ ಮತ್ತು ಅದರ ತಮ್ಮಂದಿರಾದ ವಿಧಾನಸಭೆಗಳಿಗೆ ನಡೆಯುವ ಚುನಾವಣೆಯಲ್ಲಿ ಮತದಾರನ ಪಾತ್ರವೇನು ಎಂಬ ಪ್ರಶ್ನೆ ಬಹು ಮುಖ್ಯವಾಗುತ್ತದೆ. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಸುಲಭವೇನಲ್ಲ. ಒಂದು ವೇಳೆ ಈ ಪ್ರಶ್ನೆಗೆ ಅಥವಾ ಈ ಸಮಸ್ಯೆಗೆ ಉತ್ತರ ದೊರೆತರೂ ಅದನ್ನು ಒಪ್ಪುವ ರಾಜಕೀಯ ಇಚ್ಛೆಯಾಗಲಿ, ಮನೋಧರ್ಮವಾಗಲಿ ಸಧ್ಯಕ್ಕೆ ನಮ್ಮ ಭಾರತೀಯರಲ್ಲಿ ಇಲ್ಲವಾಗಿದೆ.

ಗಾಂಧೀಜೀಯವರು ಗಣರಾಜ್ಯದ ಮತ್ತು ಗ್ರಾಮಸ್ವರಾಜ್ಯದ ಮಾತುಗಳನ್ನು ಹೇಳಿದ್ದರು. ಗಾಂಧೀಜೀಯವರ ಈ ವಿಚಾರವನ್ನು ಎಷ್ಟು ಜನ ಭಾರತೀಯರು ಮತ್ತು ಎಷ್ಟು ರಾಜಕೀಯ ಪಕ್ಷಗಳು ಒಪ್ಪಲು ಸಿದ್ಧವಿವೆ? ಅದೇ ರೀತಿ ಪಕ್ಷರಾಜಕಾರಣ ಮತ್ತು ಅಧಿಕಾರ ರಾಜಕೀಯದಿಂದ ಬೇಸತ್ತಿದ್ದ ಜಯಪ್ರಕಾಶ ನಾರಾಯಣರು ಹೇಳಿದ್ದ ಪಕ್ಷಾತೀತ ಪ್ರಜಾಪ್ರಭುತ್ವದ ಸಲಹೆಯನ್ನು ಎಷ್ಟು ಜನ ಭಾರತೀಯರು ಮತ್ತು ಎಷ್ಟು ರಾಜಕೀಯ ಪಕ್ಷಗಳು ಒಪ್ಪಲು ಸಿದ್ಧವಿವೆ? ಬರಲಿರುವ ಚುನಾವಣೆಯಲ್ಲಿ ಮತದಾರನ ಪಾತ್ರವೇನು ಎಂಬ ಪ್ರಶ್ನೆಗೆ ಉತ್ತರ ಕೊಡುವ ಮೊದಲೇ ಮತದಾರನನ್ನು ಕಾಡುವ ತೀವ್ರತಮವಾದ ಪ್ರಶ್ನೆ ತತ್ವರಹಿತ ಪಕ್ಷಗಳಿಗೆ ಅದೆಂಥ ಮತ?

***

ಮಾನವ ಜೀವನದ ಸಂತೋಷ

-ಎ.ಪಿ.ಜೆ. ಅಬ್ದುಲ್‌ಕಲಾಂ

ಭಾರತದ ರಾಷ್ಟ್ರಪತಿಯಾಗಿ ನಾನು ಅಧಿಕಾರ ವಹಿಸಿಕೊಳ್ಳುವಾಗ ಎರಡು ಭರವಸೆಗಳನ್ನು ಕೊಟ್ಟಿದ್ದೆ. ಒಂದು ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವುದು. ಎರಡನೇಯದು ಭಾರತೀಯರೆಲ್ಲರ ಮನಗಳ ಏಕತೆಗಾಗಿ ಕೆಲಸ ಮಾಡುವುದು. ಇಪ್ಪತ್ತಾರು ಕೋಟಿ ಜನರು ಬಡತನದ ರೇಖೆಯ ಕೆಳಗೆ ವಾಸಿಸುತ್ತಾರೆ ಅಲ್ಲದೆ ಇಪ್ಪತ್ತು ವರ್ಷದ ಕೆಳಗಿನವರು ೩ಂಕೋಟಿ ಯುವಕರಿದ್ದಾರೆ. ಇವೆರಡು ಸಮೂಹಗಳು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಶಾಂತಿ ಹಾಗೂ ಸೌಹಾರ್ದಪೂರ್ಣ ವಾತವರಣದಲ್ಲಿ ಹೊಂದಲು ಬಯಸುತ್ತವೆ. ೨೦೨೦ನೇ ಇಸವಿಯ ವೇಳೆಗೆ ಭಾರತ ಸಾಧಿಸಬೇಕೆಂದಿರುವ ಸುಸ್ಥಿರ ಏಳಿಗೆಗಾಗಿ ದೇಶ ೫ ಪ್ರಮುಖ ವಿಷಯಗಳನ್ನು ಗುರ್ತಿಸಿದೆ. ಅವು ವ್ಯವಸಾಯ ಮತ್ತು ಆಹಾರ ಸಂಸ್ಕರಣ, ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ, ಮೂಲಭೂತ ಸೌಲಭ್ಯಗಳ ಅಭಿವೃದ್ಧಿ. ಇದರಲ್ಲಿ ನದಿಗಳ ಜೋಡಣೆ, ಗ್ರಾಮೀಣ ಪ್ರದೇಶಕ್ಕೆ ನಗರಗಳಲ್ಲಿಯಂತಹ ಸೌಲಭ್ಯಗಳನ್ನು ಒದಗಿಸುವುದೂ ಕೂಡ ಸೇರಿದೆ. ಗ್ರಾಮಗಳು ಅಭಿವೃದ್ಧಿಹೊಂದಿದರೆ ರಾಜ್ಯಗಳು ಅಭಿವೃದ್ಧಿ ಹೊಂದುತ್ತವೆ. ರಾಜ್ಯಗಳು ಅಭಿವೃದ್ಧಿಹೊಂದಿದರೆ ಭಾರತ ಅಭಿವೃದ್ಧಿಹೊಂದುತ್ತದೆ. ೨೦೦೨ ಆಗಸ್ಟ್ ೧೫ರ ಸ್ವಾತಂತ್ರ್ಯೋತ್ಸವದ ದಿನ ಪ್ರಧಾನ ಮಂತ್ರಿಯವರು ತಮ್ಮ ಭಾಷಣದಲ್ಲಿ ೨೦೨೦ ನೇ ಇಸವಿಯ ಹೊತ್ತಿಗೆ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುತ್ತದೆಂದು ಹೇಳಿದ್ದಾರೆ. ಭಾರತ ಸರ್ಕಾರ ನದಿಗಳ ಜೋಡಣೆ ಮತ್ತು ಹಳ್ಳಿಗಳಲ್ಲಿ ನಾಗರಿಕ ಸೌಲಭ್ಯಗಳ ನಿರ್ಮಾಣ ಇತ್ಯಾದಿ ಅನೇಕ ಯೋಜನೆಗಳನ್ನು ಪ್ರಾರಂಭಿಸಿದೆ. ಈ ಯೋಜನೆ ಯಶಸ್ವಿಯಾಗಿ ಅನುಷ್ಠಾನಕ್ಕೆ ಬರಬೇಕಾದರೆ ನೈತಿಕ ಮತ್ತು ಆಧ್ಯಾತ್ಮಿಕ ತಳಹದಿ ಅಗತ್ಯ. ಈ ಸಂದರ್ಭದಲ್ಲಿಯೇ ರಾಷ್ಟ್ರೀಯ ಅಭಿವೃದ್ಧಿ ಮತ್ತು ಅಧ್ಯಾತ್ಮಿಕ ಸಂವೇದನಾಶೀಲತೆ ಪರಮೋಚ್ಚ ಮಹತ್ವವನ್ನು ಪಡೆಯುತ್ತವೆ. ಈ ಉದ್ದೇಶ್ಯ ಸಾಧಿತವಾಗಬೇಕಾದರೆ ಆರ್ಥಿಕ ಅಭಿವೃದ್ಧಿ ಮತ್ತು ಧಾರ್ಮಿಕ ಅಂತಃಶಕ್ತಿಗಳ ಮಧ್ಯ ಪರಿಣಾಮಕಾರಿಯಾದ ಸಂಪರ್ಕ ಉಂಟಾಗಬೇಕು, ಏಕೆಂದರೆ ನಮ್ಮ ನಾಗರಿಕತೆಯ ಪರಂಪರೆಯಿಂದ ನಾವು ಪಡೆದಿರುವಂತಹ ಮೌಲ್ಯಗಳ ಮೇಲೆ

ಅಭಿವೃದ್ಧಿ ಹೊಂದಿದ ವಿಶ್ವವನ್ನು ಕಟ್ಟಬೇಕೆಂಬುದೇ ನಮ್ಮ ಉದ್ದೇಶ್ಯವಾಗಿದೆ. ಈ ಮಹತ್ತರವಾದ ಉದ್ದೇಶ್ಯದ ಸಾಧನೆ, ಮನಸ್ಸುಗಳ ಏಕತೆಯಿಂದ ಮಾತ್ರ ಸಾಧ್ಯ.

ಮನಸ್ಸುಗಳ ಏಕತೆಯನ್ನು ಹುಡುಕಿಕೊಂಡು ನಾನು ನಮ್ಮ ದೇಶದ ಮತ್ತು ವಿಶ್ವದ ಅನೇಕ ದೊಡ್ಡ ಧಾರ್ಮಿಕ ಸ್ಥಳಗಳಿಗೆ ಭೇಟಿಕೊಟ್ಟಿದ್ದೇನೆ.

ತವಾಂಗ್ ಎಂಬುದು ಅರುಣಾಚಲಪ್ರದೇಶದಲ್ಲಿಯ ೩೦೦೦ ಮೀ ಎತ್ತರದಲ್ಲಿರುವ ಮಂಜು ಮುಸುಕಿದ ಒಂದು ಸುಂದರವಾದ ತಾಣ. ಅಲ್ಲಿ ವಿಶ್ವದ ಪ್ರಾಚೀನತಮ ಬೌದ್ಧ ದೇವಾಲಯವಿದೆ. ಅಲ್ಲಿಯ ಜನ ಅದರ ಆಶ್ರಯದಲ್ಲಿ ನಿಜವಾಗಿಯೂ, ಸಂತೋಷವಾಗಿಯೂ, ಮತ್ತು ಶಾಂತಿಯಿಂದಲೂ ವಾಸಿಸುತ್ತಿದ್ದಾರೆ. ನನ್ನ ಭೇಟಿಯ ಸಮಯದಲ್ಲಿ ನಾನು ಆ ದೇವಾಲಯದ ಪ್ರಮುಖ ಸನ್ಯಾಸಿಯನ್ನು ತವಾಂಗ್‌ನ ಈ ಹೃದಯಂಗಮ ಶಾಂತಿಯ ಗುಟ್ಟೇನೆಂದು ಕೇಳಿದೆ. "ನೀವು ಭಾರತದ ೩೦೦೦ ವರ್ಷಗಳ ಹಿಂದಿನ ಇತಿಹಾಸದ ಕಡೆಗೆ ನೋಡಿದರೆ ಭಾರತವು ಯಾವಾಗಲೂ ಶಾಂತಿಯ ಪರವಾಗಿಯೆ ಇತ್ತೆಂಬುದು ನಿಮಗೆ ತಿಳಿಯುತ್ತದೆ." ಎಂಬುದಾಗಿ ಆ ಸನ್ಯಾಸಿ ಉತ್ತರಿಸಿದರು. 'ಭಾರತ ಶಾಂತಿಗಾಗಿ ಕೆಲಸ ಮಾಡಿತು, ಶಾಂತಿಗಾಗಿ ಪ್ರಾರ್ಥಿಸಿತು ಮತ್ತು ಅದು ಶಾಂತಿಗಾಗಿಯೇ ಬದುಕಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಶಾಂತಿ ಎಂಬುದು ಕಡಿಮೆಯಾಗಿದೆ ಎಂದು ತೋರುತ್ತದೆ. ಆದ್ದರಿಂದ ಶಾಂತಿಯನ್ನು ಮರಳಿ ಹೇಗೆ ಪಡೆಯುವುದು' ಎಂದು ಆ ಸನ್ಯಾಸಿಯು ಅಲಂಕಾರಿಕ ಶೈಲಿಯಲ್ಲಿ ಕೇಳಿದರು. ವಿಪರ್ಯಾಸವೇನೆಂದರೆ ನಿಮ್ಮೊಳಗಿರುವ "ನಾನು" ಎಂಬ ಭಾವನೆಯು ಶಾಂತಿಯನ್ನು ಬಯಸುತ್ತದೆ.

ಆದರೂ ಸಹ ಶಾಂತಿಯನ್ನು ಪಡೆಯ ಬೇಕಾದರೆ "ನಾನು ಮತ್ತು ನನಗೆ" ಎಂಬುದರಿಂದ ಬಿಡುಗಡೆ ಹೊಂದಬೇಕು. ಈ ಎರಡು ಮೂಲಸ್ವಭಾವಗಳನ್ನು ತೆಗೆದುಹಾಕಿದರೆ ಅಹಂ ಅಡಗಿ ಹೋಗುವುದು. ಹಿಗೆಂದು ಆ ಸನ್ಯಾಸಿಯು ನನಗೆ ಹೇಳಿದರು.

ಯಾವಾಗ ಅಹಂ ಎಂಬುದು ಅಡಗಿ ಹೋಗುತ್ತದೋ ಆಗ ದ್ವೇಷವೂ ಇಲ್ಲವಾಗುತ್ತದೆ, ಯಾವಾಗ ದ್ವೇಷವು ಇಲ್ಲವಾಗುತ್ತದೋ ಆವಾಗ ಮನಸ್ಸಿನಲ್ಲಿ ಮತ್ತು ಶರೀರದಲ್ಲಿರುವ ಹಿಂಸೆಯು ಕಣ್ಮರೆಯಾಗುತ್ತದೆ. ಆದ್ದರಿಂದ ನೀವು ಅಹಂ ಅನ್ನು ತ್ಯಾಗಮಾಡಿದಾಗ ಮತ್ತು ಸ್ವಾರ್ಥ ಭಾವನೆಯನ್ನು ಬಿಟ್ಟಾಗ ಶಾಂತಿ ಬರುತ್ತದೆ.

ಬಲ್ಗೇರಿಯಾದ ಪರ್ವತ ಶ್ರೇಣಿಯಲ್ಲಿ 'ರಿಲಾ' ಎಂಬಲ್ಲಿರುವ ಒಂದು ಕ್ರಿಶ್ಚನ್ ದೇವಸ್ಥಾನಕ್ಕೆ ಭೇಟಿ ಕೊಟ್ಟೆ. ಈ ಪವಿತ್ರವಾದ ಕ್ಷೇತ್ರ ಬಲ್ಗೇರಿಯಾದ ಮಧ್ಯಕಾಲೀನ ಆಧ್ಯಾತ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸಿತ್ತು. ೧೯ನೇ ಶತಮಾನದ ಪ್ರಾರಂಭದಲ್ಲಿ ನಡೆದ ದಾಳಿಗಳ ಕಾರಣದಿಂದಾಗಿ ಬೆಂಕಿಯ ಅನಾಹುತಕ್ಕೆ ತುತ್ತಾಗಿ ಈ ಪವಿತ್ರ ಸ್ಥಳವು ಸುಟ್ಟು ಹೋಗಿದ್ದರೂ ಸಹ ನಂತರ ಅದು ಪುನರ್ ನಿರ್ಮಿಸಲ್ಪಟ್ಟಿತು. ಅದು ಈಗ ದೊಡ್ಡ ಕೋಟೆಯಿಂದ ಸುತ್ತುವರಿಯಲ್ಪಟ್ಟಿದೆ. ನಾನು ಶಿಲುಬೆಯ ಹತ್ತಿರ ಹೋದೆ ಮತ್ತು ಸಂತ ಪ್ರಾನ್ಸಿಸ್‌ರವರ (ಆಸಸಿಸಿ)ಎಂಬ ಪ್ರಾರ್ಥನೆಯ ಒಂದು ಭಾಗವನ್ನು ಓದುವುದಕ್ಕಾಗಿ ಪೂಜ್ಯ ಬಿಷಪ್ ಜಾನ್‌ರವರ ಅನುಮತಿ ಕೇಳಿದೆ. "ದೇವರೇ ನನ್ನನ್ನು ಶಾಂತಿಯ ಒಂದು ಸಾಧನವನ್ನಾಗಿಮಾಡು; ದ್ವೇಷ ವಿರುವೆಡೆಯಲ್ಲೆಲ್ಲಾ ಪ್ರೇಮವನ್ನು ಬಿತ್ತಲು ಅವಕಾಶ ಕೊಡು."

ನನ್ನ ಬಾಲ್ಯದ ಒಂದು ಅನುಭವವನ್ನು ನಾನು ಈಗಲೂ ನೆನಪಿಸಿಕೊಳ್ಳುತ್ತೇನೆ ಆಗ ನನಗೆ ೧೦ ವರ್ಷ. ಪ್ರತಿ ದಿನ ಸಂಜೆ ನಾನು ಶಾಲೆಯಿಂದ ಹಿಂದಿರುಗಿದಾಗ ನನ್ನ ತಂದೆ ನಮಾಜ಼ಿಗೆ ಹೋಗಿರುತ್ತಿದ್ದರು. ನನ್ನ ತಾಯಿ ಆ ಸಮಯದಲ್ಲಿ ದೇವಭಕ್ತೆಯಾಗಿ ನನಗೆ ಕಾಣುತ್ತಿದ್ದಳು ತಾಯಿ ಕುರಾನಿನ ಎರಡು ಸುರಾಗಳನ್ನು ಪಠಿಸುತ್ತಿದ್ದಳು. ಒಂದು ದಿವಸ ನಾನು ನನ್ನ ತಂದೆ ಮತ್ತು ತಾಯಿಯನ್ನು "ಲಕ್ಕಮ್ ತನುಕ್ಕಮ್" ಅಂದರೇನು ಎಂದು ಕೇಳಿದೆ. ನನ್ನ ತಂದೆ ಆ ಪ್ರಶ್ನೆಗೆ ಉತ್ತರಿಸಿದ್ದು ಹೀಗೆ, "ಪ್ರತಿಯೊಬ್ಬರು ಒಂದು ಮಾರ್ಗವನ್ನು ಅನುಸರಿಸುತ್ತಾರೆ ತಾನು ಅನುಸರಿಸುವ ಮಾರ್ಗದಲ್ಲಿಯ ತನ್ನ ಕೃತ್ಯಗಳಿಗೆ ಅವನೇ ಜವಾಬುದಾರ."

'ನಾನು ಮುಸ್ಲಿಮನಾಗಿದ್ದರೂ ರಾಮೇಶ್ವರದಲ್ಲಿರುವ ಶಿವ ದೇವಸ್ಥಾನದ ದೊಡ್ಡ ಹಿಂದೂ ಭಕ್ತನಾಗಿದ್ದ 'ಪಕ್ಷಿ ಲಕ್ಷ್ಮಣ ಶಾಸ್ತ್ರಿಗಳು' ಎಂಬುವರನ್ನು ಭೇಟಿ ಮಾಡುವುದನ್ನು ನೀನು ನೋಡಿದ್ದಿಯೆ. ಅಲ್ಲದೆ ನಮ್ಮ ಪ್ರದೇಶದಲ್ಲಿ ಮೊಟ್ಟ ಮೊದಲನೆಯ ಚರ್ಚ್‌ನ್ನು ಕಟ್ಟಿದ ರೆವರೆಂಡ್ ಫಾದರ್ ಬೊಡಲ್‌ರವರನ್ನು ಸಹ ಭೇಟಿ ಮಾಡುತ್ತಿದುದನ್ನು ನೀನು ನೋಡಿದ್ದಿಯೆ. ಈ ಮೂವರು ನಡೆಸುತ್ತಿದ್ದಂತಹ ಸಂವಾದವನ್ನು ಕೇಳುವಂತಹ ಸೌಭಾಗ್ಯ ನನ್ನದಾಗಿತ್ತು. ಅವರು ಪವಿತ್ರ ಕುರಾನ್, ಹಳೆಟೆಸ್ಟಾಮೆಂಟ್ ಮತ್ತು ಭಗವದ್ಗಿತೆ ಇವುಗಳಲ್ಲಿರುವ ವಿಚಾರಗಳ ಏಕರೂಪತೆಯನ್ನು ಕುರಿತು ಮಾತನಾಡುತ್ತಿದ್ದರು. ಅವರ ಚರ್ಚೆಯಿಂದ ನಾನು ಕಲಿತಿದ್ದೇನೆಂದರೆ ನಿನ್ನ ಧರ್ಮ ಯಾವುದೇ ಇರಲಿ ನೀನು ಆಯ್ಕೆ ಮಾಡಿಕೊಂಡ

ಮಾರ್ಗ ನಿನ್ನ ಉತ್ತಮ ಕೃತಿಗಳ ಆಧಾರದ ಮೇಲೆ ನಿನ್ನನ್ನು ಶಾಂತಿಯತ್ತ ಕರೆದೊಯ್ಯುವುದು ಎಂಬುದಾಗಿ. ಪ್ರತಿಯೊಬ್ಬರ ಜೀವನವು ಬೆಳಗಿನಜಾವ ಸುವಾಸನೆ ಮತ್ತು ಸೌಂದರ್ಯವನ್ನು ನೀಡಿ ಸಾಯಂಕಾಲದ ಹೊತ್ತಿಗೆ ಯಾವ ಭೂಮಿಯಲ್ಲಿ ಅದು ಜನಿಸಿತ್ತೊ ಅದೇ ಭೂಮಿಗೆ ಮೌನವಾಗಿ ಮರಳುವ ಹೂವಿನಂತಿರಬೇಕು!' ಜೀವನದ ಸಾರವನ್ನು ತಿಳಿಸುವಂತಹ ಇದಕ್ಕೂ ಉತ್ತಮವಾದ ಸಂದೇಶವನ್ನು ಈ ಮೊದಲು ನಾನು ತಿಳಿದಿರಲಿಲ್ಲ.

ಕಳೆದ ೧೮ ತಿಂಗಳುಗಳಲ್ಲಿ ನಾನು ದೇಶದ ಎಲ್ಲಾಭಾಗಗಳಲ್ಲಿ ಸಂಚರಿಸಿದ್ದೇನೆ. ಎಲ್ಲಾ ಭಾರತೀಯರು ಅವರು ಅನುಭವ ಶಾಲಿಗಳಾಗಿರಬಹುದು, ವೃದ್ಧರಾಗಿರಬಹುದು, ಉತ್ಸಾಹಿ ಯುವಕರಾಗಿರಬಹುದು, ಮುಗ್ಧರಾಗಿರಬಹುದು ಅವರೆಲ್ಲರೂ ಶಾಂತಿ ಮತ್ತು ರಕ್ಷಣೆಗಾಗಿ ಧರ್ಮದತ್ತ ನೋಡುತ್ತಾರೆ ಎಂಬ ಅನುಭವ ನನಗಾಯಿತು. ಧರ್ಮಗಳು ಸುಂದರವಾದ ತೋಟವಿದ್ದಂತೆ ಅಲ್ಲಿ ಅಮೋಘವಾದ ಸೌಂದರ್ಯವೂ, ಶಾಂತಿಯೂ ಇರುತ್ತದೆ. ಆ ಧರ್ಮಗಳು ಸುಂದರವಾದ ಹಕ್ಕಿಗಳಿಂದಲೂ, ಮಧುರವಾದ ಇಂಚರದಿಂದಲೂ ತುಂಬಿದಂತಹ ಪವಿತ್ರ ವನಗಳಿದ್ದಂತೆ. ಆದರೆ ಅವು ದ್ವೀಪಗಳಾಗಿವೆ. ಅವು ಆತ್ಮಕ್ಕೂ ಮತ್ತು ಚೇತನಕ್ಕೂ ಶಾಂತಿಯನ್ನು ತಂದುಕೊಡುವಂತಹ ಸ್ಥಳಗಳಾಗಿದ್ದರೂ ಕೂಡ ಅವು ದ್ವೀಪಗಳೇ ಆಗಿವೆ. ಒಂದು ವೇಳೆ ನಾವು ಈ ಎಲ್ಲಾ ದ್ವೀಪಗಳ ಮಧ್ಯೆ ಪ್ರೀತಿ ಮತ್ತು ಅನುಕಂಪಗಳೆಂಬ ಮಾಲೆಯ ಮೂಲಕ ಸಂಪರ್ಕವನ್ನು ಸಾಧಿಸಿದ್ದೇ ಆದರೆ ನಮ್ಮ ಮುಂದೆ ಒಂದು ಅಭಿವೃದ್ಧಿ ಹೊಂದಿದ ಭಾರತವನ್ನು ಕಾಣುತ್ತೇವೆ.

೨೦೦೩ ಅಕ್ಟೋಬರ್ ೧೫ ರಂದು ಸೂರತ್ ಸಮ್ಮೇಳನದಲ್ಲಿ ಭಾಗವಹಿಸಿದೆ. ಅಲ್ಲಿ ನಾನು ವಿವಿಧ ಮತಗಳ ಮುಖಂಡರನ್ನು ಭೇಟಿಮಾಡಿದೆ. ಅವರು ಬಹು ಸಿರಿವಂತಿಕೆಯಿಂದ ಕೂಡಿದ ಮತ್ತು ಸಾವಿರಾರು ವರ್ಷಗಳಷ್ಟು ಹಳೆಯದಾದ ನಮ್ಮ ದೇಶದ ಸಂಸ್ಕೃತಿ ಮತ್ತು ನಾಗರೀಕತೆಯ ಬಗ್ಗೆ ವಿವರಣೆಯನ್ನು ಕೊಟ್ಟರು. ನಮ್ಮ ದೇಶದಲ್ಲಿದ್ದ ಸುಸಂಬದ್ಧ ಕೌಟುಂಬಿಕ ಪದ್ದತಿ ಮತ್ತು ಅದರಲ್ಲಿದ್ದ ಪ್ರೀತಿ, ಸಹಕಾರ ಇತ್ಯಾದಿಗಳ ಬಗ್ಗೆಯೂ ತಿಳಿಸಿದರು.

ಧರ್ಮವು ಎರಡು ಅಂಶಗಳನ್ನು ಹೊಂದಿರುತ್ತದೆ. ಸಾಧುಗಳು, ಸಂತರು ಹೇಳಿದಂತಹ ಧಾರ್ಮಿಕ ವಿಚಾರಗಳು ಒಂದು ಅಂಶವಾದರೆ ಇನ್ನೊಂದು ನೈತಿಕ ನಡಾವಳಿ! ಮುಖ್ಯವಾಗಿ ಸನ್ಮಾರ್ಗದ ಜೀವನ. ಎಲ್ಲಾ ಧರ್ಮಗಳಲ್ಲಿಯ ಜೀವನದ ಸನ್ಮಾರ್ಗಗಳು ದಯೆ ಮತ್ತು ಪ್ರೇಮವನ್ನು ಪ್ರತಿಬಿಂಬಿಸುತ್ತವೆ. ೧೫ ಧಾರ್ಮಿಕ ಮುಖಂಡರುಗಳ ಸೂರತ್ ಘೋಷಣೆ ಎಲ್ಲಾ ಧರ್ಮಗಳಲ್ಲಿ ಒಂದು ಉದಾತ್ತವಾದ

ಅಂಶವಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಸೂರತ್ ಸಮ್ಮೇಳನ ಧರ್ಮಗಳನ್ನು ಸಂಪನ್ನಗೊಳಿಸುವ ಬಗ್ಗೆ ಚರ್ಚಿಸಿತು. ಪ್ರೇಮ ಮತ್ತು ದಯೆ ಎಲ್ಲಾ ಧರ್ಮಗಳನ್ನು ಸಂಪರ್ಕಿಸುವಂತಹ ಸೇತು ಬಂಧನವಾಗಿದೆಯೆಂದು ಆ ಸಮ್ಮೇಳನವು ಭಾವಿಸಿತು. ಅಲ್ಲದೆ ಆ ಸಮ್ಮೇಳನವು ಪುಷ್ಪಹಾರದಂತಿರುವ ೫ ಯೋಜನೆಗಳನ್ನು ಸೂಚಿಸಿತು. ಅವುಯಾವುವೆಂದರೆ: ಅಂತರ್‌ಧರ್ಮಗಳ ಉತ್ಸವಗಳನ್ನು ಆಚರಿಸುವುದು; ಬಹುಮುಖಿ ಧಾರ್ಮಿಕ ಸಾಮಾಜಿಕ ಯೋಜನೆಗಳು, ಅಂತರ್ ಮತಗಳ ಸಂವಾದ ಮತ್ತು ಅಂತಿಮವಾಗಿ ಧಾರ್ಮಿಕ ಮತ್ತು ಅಧ್ಯಾತ್ಮಿಕ ಮುಖಂಡರಿಂದ ವಿದ್ವಾಂಸರಿಂದ ಹಾಗೂ ವಿಚಾರಶೀಲ ನಾಗರೀಕರನ್ನು ಕೂಡಿದ ಒಂದು ರಾಷ್ಟ್ರಮಟ್ಟದ ಸ್ವತಂತ್ರವೂ ಮತ್ತು ಸ್ವನಿಯಂತ್ರಿತವೂ ಆದ ಸಂಸ್ಥೆಯನ್ನು ಸ್ಥಾಪಿಸುವುದು. ಆಧ್ಯಾತ್ಮಿಕ ಸಮುದಾಯದ ಸಹಭಾಗಿತ್ವದೊಂದಿಗೆ ಭಾರತವನ್ನು ಒಂದು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡಬೇಕೆಂದು ಸಹ ಸೂರತ್ ಘೋಷಣೆ ಅಭಿಪ್ರಾಯಪಟ್ಟಿದೆ.

ದೇವರು ಮನುಷ್ಯರಿಗೆ ಮಿದುಳನ್ನು ಮತ್ತು ಯೋಚನಾಶಕ್ತಿಯನ್ನು ಕೊಟ್ಟಿದ್ದಾನೆ. ಇದರ ಉದ್ದೇಶ್ಯವೇನೆಂದರೆ ಮಾನವನು ದೇವರ ರೂಪವನ್ನು ತಾರ್ಕಿಕವಾಗಿ ತಲುಪುವುದಕ್ಕಾಗಿ ಉಪಯೋಗಿಸಲೆಂದು. ಇದೇ ಮಾನವ ಜೀವನದ ಉದ್ದೇಶ. ವಿಜ್ಞಾನವೆಂಬುದು ಮಾನವ ಕುಲಕ್ಕೆ ದೇವರು ಕೊಟ್ಟ ಶ್ರೇಷ್ಠವರವಾಗಿದೆ. ವಿಜ್ಞಾನಮತ್ತು ತರ್ಕ! ನಾವು ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಲಿ ಆ ಕ್ಷೇತ್ರದಲ್ಲಿ ವಿಜ್ಞಾನವನ್ನು ತರ್ಕಬದ್ಧವಾಗಿ ಉಪಯೋಗಿಸಿದಲ್ಲಿ ಅದು ಸಮಾಜಕ್ಕೆ ಬಂಡವಾಳ ಸ್ವರೂಪವಾಗುತ್ತದೆ.

ನಾವು ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರಬಹುದು ಅದು ವಿಜ್ಞಾನವಾಗಿರಬಹುದು, ತಂತ್ರಜ್ಞಾನವಾಗಿರಬಹುದು, ವೈದ್ಯಕೀಯ ಕ್ಷೇತ್ರವಾಗಿರಬಹುದು, ರಾಜಕಾರಣಕ್ಷೇತ್ರವಾಗಿರಬಹುದು. ಎಲ್ಲಾ ಕ್ಷೇತ್ರದಲ್ಲಿಯೂ ಮತ್ತು ಎಲ್ಲಾ ಸಂದರ್ಭದಲ್ಲಿಯೂ ನಾವು ಸಾಮಾನ್ಯಮನುಷ್ಯನ ಸೇವೆಗೆ ಕಟಿಬದ್ಧರಾಗಿರಬೇಕು. ಅವನ ಹಿತವೇ ಎಲ್ಲಾ ಮಾನವೀಯ ಜ್ಞಾನ ಮತ್ತು ಪ್ರಯತ್ನದ ಕೇಂದ್ರಬಿಂದುವಾಗಿರಬೇಕು. ಪ್ರತಿಯೊಂದು ಧರ್ಮವೂ ತರ್ಕ ಮತ್ತು ವಿಜ್ಞಾನದೊಂದಿಗೆ ಆಧ್ಯಾತ್ಮಿಕತೆಯನ್ನು ಅಂತರ್ಗತಗೊಳಿಸಿಕೊಂಡಿರುತ್ತದೆ. ಬಹಳ ಆಧ್ಯಾತ್ಮಿಕವಾಗಿರುವ ವ್ಯಕ್ತಿಯ ಗುರಿ ಆಧ್ಯಾತ್ಮಿಕ ಅನುಭವವನ್ನು ಹೊಂದುವುದಾಗಿದ್ದರೆ ದೊಡ್ಡ ಶೋಧನೆ ವಿಜ್ಞಾನಿಯ ಗುರಿಯಾಗಿರುತ್ತದೆ. ಈ ಎರಡೂವಿಧಗಳನ್ನು ನಾವು ಸಂಯುಕ್ತಗೊಳಿಸಿದರೆ ಏಕತೆಯನ್ನು ಗ್ರಹಿಸುವಂತ

ಸ್ಥಿತಿಗೆ ತಲುಪುತ್ತೇವೆ. ಇಂತಹ ಪರಿಸರದ ನಿರ್ಮಾಣಕ್ಕಾಗಿ ವಿಜ್ಞಾನ ಮತ್ತು ಆಧ್ಯಾತ್ಮಿಕತೆಯಂತಹ ಎರಡು ಪ್ರಮುಖ ಅಂಶಗಳು ಪರಸ್ಪರ ಪ್ರತಿಕ್ರಿಯಿಸಬೇಕಾಗುತ್ತದೆ. ಇವೆರಡಕ್ಕೂ ಸೇರಿದಂತೆ ಒಂದು ಶಾಂತಿ ಪ್ರಾರ್ಥನೆ ತಳಹದಿಯಾಗಬಲ್ಲದು.

'ಓ ದೇವರೇ... ದೇಶದ ಜನರ ಮನಸ್ಸಿನಲ್ಲಿ ವಿಚಾರಗಳನ್ನು ಮತ್ತು ಕ್ರಿಯೆಗಳನ್ನು ಉಂಟುಮಾಡು. ಏಕೆಂದರೆ ಅವರು ಒಂದಾಗಿ ಬಾಳಲಿ. ಓ ದೇವರೇ... ಜನರು ಸದಾಚಾರಿಗಳಾಗುವಂತೆ ಅವರನ್ನು ಆಶೀರ್ವದಿಸು. ಏಕೆಂದರೆ ಸದಾಚಾರವುಳ್ಳ ಜೀವನ ನೈತಿಕ ಶಕ್ತಿಯನ್ನು ಕೊಡುತ್ತದೆ.

ಓ ದೇವರೇ... ದೇಶದ ಜನರು ವಿಭಜನೆಯ ಶಕ್ತಿಗಳನ್ನು ಎದುರಿಸುವಂತಹ ಸಾಮರ್ಥ್ಯವನ್ನು ಕೊಡುವ ಹಾಗೆ ಮಾಡು. ಹಾಗೆಯೇ ಎಲ್ಲಾ ಧಾರ್ಮಿಕ ಮುಖಂಡರಿಗೆ ಬಲವನ್ನು ಕೊಡು.

ಓ ದೇವರೇ.. ವಿವಿಧ ಸಿದ್ಧಾಂತಗಳನ್ನು ಸಹಿಸಿಕೊಳ್ಳುವಂತಹ ಮನೋವೃತ್ತಿಯನ್ನು ಬೆಳೆಸಿಕೊಳ್ಳಲು ಜನರಿಗೆ ಮಾರ್ಗದರ್ಶನ ನೀಡು... ಮತ್ತು ವ್ಯಕ್ತಿಗಳಲ್ಲಿಯೂ, ಸಂಘಟನೆಗಳಲ್ಲಿಯೂ, ರಾಷ್ಟ್ರಗಳಲ್ಲಿಯೂ ಇರುವ ದ್ವೇಷವನ್ನು ಮೈತ್ರಿಯಲ್ಲಿ ಮತ್ತು ಸಮರಸತೆಯಲ್ಲಿ ಪರಿವರ್ತಿಸುವಂತಹ ಮನೋವೃತ್ತಿಯನ್ನು ಉಂಟುಮಾಡು. ವ್ಯಕ್ತಿಗಿಂತ ದೇಶ ದೊಡ್ಡದೆಂಬ ವಿಚಾರವನ್ನು ನೆಲೆಯೂರಿಸು. ಈ ವಿಚಾರ ಎಲ್ಲಾ ಮುಖಂಡರಲ್ಲಿ ಮತ್ತು ಜನರಲ್ಲಿ ಮೂಡಲಿ.

ಓದೇವರೇ... ದೇಶವನ್ನು ಅಬಿವೃದ್ಧಿಶೀಲವನ್ನಾಗಿ ಮಾಡಲು ಮತ್ತು ವಿಶ್ವಶಾಂತಿಯನ್ನು ಸ್ಥಾಪಿಸಲು ನೆರವಾಗುವಂತೆ ಸಹನಶೀಲರಾಗಿ ದುಡಿಯಲು ಜನರನ್ನು ಆಶೀರ್ವದಿಸು.

–ಅನು.ಸು.ಕೌ.

(ಹಿಂದೂ ಸಾಭಾರ)

* * *

ಸಹಸ್ರಕ್ಕೊಬ್ಬ ಚಲಂ!

ಚಲಂ ಎಂಬ ಹೆಸರು ತೆಲುಗರಿಗೆ ಒಮ್ಮೆಗೆ ಒಬ್ಬ ವಿಕ್ಷಿಪ್ತ ವ್ಯಕ್ತಿತ್ವದ, ಅಗಾಧ ಜೀವನ ಪ್ರೀತಿಯ ವಿಚಿತ್ರ ವ್ಯಕ್ತಿಯನ್ನು ಹಾಗೂ ಆಂಧ್ರಸಾರಸ್ವತ ಲೋಕ ಕಂಡ ಒಬ್ಬ ಅದ್ಭುತ ಬರಹಗಾರನನ್ನು ನೆನಪಿಗೆ ತಂದುಕೊಡುತ್ತದೆ. ಇವತ್ತಿಗೂ ತೆಲುಗು ಸಾಹಿತ್ಯ ಓದಿಕೊಂಡ ಸಹೃದಯರಲ್ಲಿ ಶ್ರೀಶ್ರೀ, ಸಿನಾರೆ, ವಿಶ್ವನಾಥ ಸತ್ಯನಾರಾಯಣ ಮತ್ತು ದೇವರಕೊಂಡ ಬಾಲಗಂಗಾಧರ ತಿಲಕ್ ಇವರುಗಳಿಗೆ ಯಾವ ಸ್ಥಾನವಿದೆಯೋ ಅದಕ್ಕಿಂತ ಹೆಚ್ಚಿನ ಮತ್ತು ಮಹತ್ವದ ಸ್ಥಾನ ಚಲಂರಿಗಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಏಕೆಂದರೆ, ಚಲಂರಲ್ಲಿ ಒಬ್ಬ ಅಪರೂಪದ ಕವಿಯಿದ್ದ. ನಿಂತಲ್ಲಿ ನಿಲ್ಲದ ಚಂಚಲನಿದ್ದ, ಅದ್ಭುತವೆನಿಸುವಂಥ ಗದ್ಯ ಲೇಖಕನಿದ್ದ. ಎಲ್ಲಕ್ಕೂ ಮಿಗಿಲಾಗಿ ಜೀವನದ ಪ್ರತಿಕ್ಷಣವನ್ನು ರಸ ಹೀರಿ ಬದುಕಬೇಕೆಂಬ ಮಹತ್ವಾಕಾಂಕ್ಷೆಯ, ಅನನ್ಯ ಜೀವನ ಪ್ರೀತಿಯ ಒಬ್ಬ ಸಾದಾ ಸೀದಾ ಮನುಷ್ಯನಿದ್ದ ಮತ್ತು ಚಲಂರ ಬರಹಗಳಲ್ಲಿ ಕಾಣಸಿಗುವ ಆಶ್ಚರ್ಯದ ನೋಟವಿದೆಯಲ್ಲ ಅದು ಅವರೊಬ್ಬ ಸಾದಾ ಸೀದಾ ಮನುಷ್ಯರಾಗಿದ್ದರಿಂದಲೇ ಕಾಣಿಸುತ್ತಿತ್ತು ಕೂಡ.

ಇಡೀ ಭಾರತೀಯ ಸಾಹಿತ್ಯದಲ್ಲಿ ಚಲಂರ ಬರಹಗಳಿಗೊಂದು ವಿಶಿಷ್ಟ ಸ್ಥಾನವಿದೆ. ಬದುಕನ್ನು ಅನುಕ್ಷಣವೂ ಪ್ರೀತಿಸುತ್ತ, ಅನುಭವಿಸುತ್ತ, ಮುಖ್ಯವಾಗಿ ಬದುಕುತ್ತ ಸಾಗಿದ ವೈಕಂ ಮಹಮ್ಮದ್ ಬಷೀರ್‌ರ ಹೆಜ್ಜೆಯ ಜಾಡಿನಲ್ಲೇ ನಡೆದುಹೋದ ಮತ್ತೊಬ್ಬ ಲೇಖಕರೆಂದರೆ ಅದು ನಿಸ್ಸಂಶಯವಾಗಿಯೂ ಚಲಂರೇ. ಅವರಿಬ್ಬರ ಬರಹ ಮತ್ತು ಬದುಕುಗಳಲ್ಲಿ ಆ ಮಾತ್ರದ ಹೋಲಿಕೆಗಳು ಇಲ್ಲೆಲ್ಲೂ ಕಾಣಸಿಗುತ್ತವೆ, ಹೇರಳವಾಗಿ.

ಚಲಂರ ಬಕುಕೇ ಒಂದು ಸುಂದರ ಕಾವ್ಯ. ಅಲ್ಲಿ ಅಮಾವಾಸ್ಯೆಯ ಕತ್ತಲಿಗೂ, ಅಮಾಯಕ ಮಗುವಿನ ಬೆತ್ತಲೆಗೂ ಕೂಡ ಅವುಗಳದೇ ಆದ ಸೌಂದರ್ಯವಿದೆ. ಅವುಗಳನ್ನು ತಮ್ಮ ಆತ್ಮಚರಿತ್ರೆಯಲ್ಲಿ ದಾಖಲಿಸುವ ರೀತಿಯಾದರೂ ಎಂಥದಂತೀರಿ? ಅದನ್ನು ಮಾತ್ರ ಓದಿಯೇ ಅನುಭವಿಸಬೇಕು. ‘ಮೆಲ್ಲುವನೇ ಬಲ್ಲ ಬೆಲ್ಲದ ಸಿಹಿಯ’ ಎಂಬಂತೆ ಚಲಂರ ಬರಹಗಳ ಸೊಗಸನ್ನು ಓದಿ ಅರಿತ ಸಹೃದಯನಲ್ಲದೆ ಮತ್ಯಾರು ಬಲ್ಲರು? ಅದನ್ನು, ಅದರ ಸಾರಸಂಗ್ರಹವನ್ನು ಶಬ್ದಗಳಲ್ಲಿ ಹಿಡಿದಿಡುವುದಾದರೂ ಏನು ಸುಮ್ಮನೇ ಮಾತೇ?

ಅದು ಸಂಗೀತವನ್ನು ಕಂಠದಲ್ಲಿ ಕೂಡಿಹಾಕುತ್ತೇನೆಂಬ ಅಹಮಿಕೆಯ ಮಾತಾದೀತಷ್ಟೇ. ಹೌದು. ಚಲಂರ ಬರಹಗಳಲ್ಲೊಂದು ಸಂಗೀತವಿತ್ತು. ಅದನ್ನು ಓದುತ್ತ ಕೂತವರು ಓದುತ್ತ ಓದುತ್ತ ಒಂದಾಗಬೇಕು. ಅಲ್ಲಿ ಓದುಗ ಮತ್ತು ಬರಹಗಾರ ಎಂಬ ಭೇದವೇ ಇಲ್ಲ. ಪಕ್ಕದ ಮನೆಯ ಅರೆತೆರೆದ ಕಿಟಕಿಯಿಂದ ಕೇಳಿಬರುವ ಮೆಲುದನಿಯ ಸುಮಧುರ ಸಂಗೀತಕ್ಕೆ , ಈ ಮನೆಯಲ್ಲಿರುವವನ ಮನಸ್ಸು ಮೋದಗೊಂಡು ಇಡೀ ದೇಹವನ್ನು ಕಿವಿಯಾಗಿಸಿಕೊಂಡು ಕೂತು ಸಂಭ್ರಮಿಸುವುದಿಲ್ಲವೇ? ಥೇಟು ಹಾಗೆ– ಚಲಂರನ್ನು ಓದುವುದೆಂದರೆ. ಚಲಂರ ಬರಹಗಳಿಗೆ ನಿರ್ದಿಷ್ಟ ಗುರಿಯಿಲ್ಲ. ಗುರುವಂತೂ ಮೊದಲೇ ಇಲ್ಲ. ಅದೊಂದು ಮುಕ್ತ ಹರಟೆಯಂತೆ. ಅದರ ಓಘ ಎತ್ತವೂ ಹರಿದೀತು. ಹಾಗೆ ಅಂತಿಲ್ಲ. ಸೂತ್ರ ಹರಿದ ಗಾಳಿಪಟ ಸೂತ್ರವಿದ್ದಾಗಿನಗಿಂತ ಚೆಂದವಾಗಿ ಬಳಕುತ್ತ ಹೀಗೆ ಹೀಗೆ ಬೀಳುತ್ತ ಬರುತ್ತಿರಬೇಕಾದರೆ ಅದು ಎಲ್ಲಿ ಬಿದ್ದೀತೆಂದು ಯಾರು ತಾನೆ ಹೇಳಬಲ್ಲರು? ಖುದ್ದು ಅದನ್ನು ಕೈಹಿಡಿದು ಕರೆದುಕೊಂಡು ಬರುತ್ತಿರುವ ಗಾಳಿಗೂ ಗೊತ್ತಿರುವುದಿಲ್ಲ ಅಲ್ಲವೇ? – ಹಾಗೆ, ಚಲಂರ ಕಲಮಿನಿಂದ ಮೂಡಿಬಂದ ಸಾಹಿತ್ಯವಿರುತ್ತೆ.

ಅಷ್ಟಿಲ್ಲದೆ ಒಂದು ಕಾಲದಲ್ಲಿ ತೆಲುಗರೆಲ್ಲ ಚಲಂರ ಒಂದೊಂದು ಕಥೆಗಾಗಿ ಆ ಪರಿ ಚಡಪಡಿಸುತ್ತಿದ್ದರಾ? ಮೊದಮೊದಲು ಚಲಂರು ಬರಹ ಪ್ರಾರಂಭಿಸಿದಾಗ ಗುತ್ತಿಗೆ ಸಾಹಿತಿಗಳ ಪರವಹಿಸಿದ್ದ ಪತ್ರಿಕಾ ಸಂಪಾದಕರು ಕೂಡ ಕೊನೆಕೊನೆಗೆ ತಮ್ಮ ವಿಶೇಷಾಂಕಗಳಿಗಾಗಿ ಹೇಗಾದರೂ ಮಾಡಿ ಒಂದು ಕಥೆ ಗಿಟ್ಟಿಸಿಕೊಳ್ಳಬೇಕೆಂದು ಶತಾಯಗತಾಯ ಪ್ರಯತ್ನಿಸುತ್ತಿದ್ದರು. ಚಲಂರ ಭಾಷೆಯ ಮೋಡಿಗೆ ಮುದಗೊಂಡಿದ್ದ ಓದುಗ ಮನಸ್ಸು ಮತ್ತೆ ಮತ್ತೆ ಚಲಂರನ್ನು ಬೇಡುತ್ತಿತ್ತು. ಆ ಬರಹದಲ್ಲಿರುವ ಹರಿವ ನೀರಿನ ಜುಳುಜುಳು ನಿನಾದ, ಕಾಡಿನ ಗವ್ವೆನ್ನುವ ಮೌನ, ತುಂಬಿದ ಮನೆಯ ಸಡಗರ, ಮುಗಿಯದ ಪ್ರೀತಿಯ ಸಂಭ್ರಮ, ಅವಳ ಪ್ರತೀಕ್ಷೆಯಲ್ಲಿನ ಮೋದಗಳಿಗಾಗಿ ಮನಸ್ಸು ಹುರಿಗೊಂಡು ತುದಿಗಾಲ ಮೇಲೆ ನಿಂತು ಕಾಯುತ್ತಿತ್ತು. ಓದುಗ ದೊರೆ ಧಾವಂತಕ್ಕೆ ಬಿದ್ದು ಚಲಂರ ಬರಹಗಳಿಗಾಗಿ ಚಡಪಡಿಸುತ್ತಿದ್ದ. ಏಕೆಂದರೆ ಆ ಬರಹಗಳಲ್ಲಿ ಒಂದು ಭಾಷಾ ಸರಳತೆಯಿತ್ತು. ಆದರೆ, ಅದರ ತುಂಬ ತುಂಬಿರುತ್ತಿದ್ದುದು ಮಾತ್ರ ಭಾವ ಶ್ರೀಮಂತಿಕೆಯೇ. ಪ್ರತಿಯೊಂದನ್ನು ತುಂಬು ಶ್ರದ್ಧೆಯಿಂದ, ಅದಮ್ಯ ಪ್ರೀತಿಯಿಂದ ಮಾಡುವ ಮನಸ್ಸೊಂದು ಅಲ್ಲಿ ಮೌಜೂದಾಗಿರುತ್ತಿತ್ತು. ಚಲಂರು ಬರಹವನ್ನು ಎಷ್ಟು ಪ್ರೀತಿಸುತ್ತಿದ್ದರೋ ಬದುಕನ್ನೂ ಅಷ್ಟೇ ಪ್ರೀತಿಸುತ್ತಿದ್ದರು.

ಮೂಲತ: ಕಥೆಗಾರರಾಗಿದ್ದರಿಂದ ಕಥೆಯನ್ನು ಮಾತ್ರವೇ ಸಾಹಿತ್ಯವೆಂದು ಪರಿಗಣಿಸಿ ಅದನ್ನು ಮಾತ್ರ ತುಂಬು ಶ್ರದ್ಧೆಯಿಂದ ಬರೆಯಲು ಕೂರುವಂಥ ಕೆಲಸ ಚಲಂ ಎಂದೂ ಮಾಡಲಿಲ್ಲ. ಅವರಿಗೆ ಪತ್ರ ಬರೆಯುವುದು ಕೂಡ ಒಂದು ಸೃಜನಶೀಲ ಹವ್ಯಾಸವೇ ಆಗಿದ್ದು ಅದೂ ಕೂಡ ಅವರ ಪಾಲಿಗೆ ಸಾಹಿತ್ಯ ಸೃಷ್ಟಿಯ ಕ್ರಿಯೆಯೇ ಆಗಿರುತ್ತಿತ್ತು. ಎಷ್ಟರಮಟ್ಟಿಗೆ ಅವರ ಪತ್ರಗಳು ಪ್ರಸಿದ್ಧವಾಗಿದ್ದವೆಂದರೆ ಅವುಗಳನ್ನು ಬರೆಸಿಕೊಂಡು ಯಾವೊಬ್ಬ ಅಡ್ರೆಸ್ಸಿಯೂ ತಮಗೆ ಬಂದ ಒಂದೇ ಒಂದು ಪತ್ರವನ್ನೂ ಬಿಸಾಡುತ್ತಿರಲಿಲ್ಲ. ಹಾಗೆ ಅವರೆಲ್ಲ ಜತನದಿಂದ ಎತ್ತಿಟ್ಟುಕೊಂಡ ಪತ್ರಗಳೆಲ್ಲ ಮುಂದೆ ಒಂಬತ್ತು ಸಂಪುಟಗಳಾಗಿ ಪ್ರಕಟಗೊಂಡವು, ಆ ಮಾತು ಬೇರೆ. ಪತ್ರ ಕೂಡ ಒಂದು ಸಣ್ಣ ಕಥೆಯೇ ಎಂಬುದು ಚಲಂರ ನಿಲುವಾಗಿತ್ತು.

ಪತ್ರಗಳದೊಂದು ಕಥೆಯಾದರೆ ಪ್ರೇಮ ಪತ್ರಗಳದು ಮತ್ತೊಂದು ಕಥೆ. ಚಲಂರು ಪತ್ರಿಕೆಗಳಿಗಾಗಿ ಬರೆದುಕೊಟ್ಟ ಪ್ರೇಮ ಪತ್ರಗಳನ್ನು ಮುಂದೆ 'ಪ್ರೇಮ ಲೇಖಾಲು' ಎಂಬ ಪುಸ್ತಕವಾಗಿ ಹೊರತರಲಾಯಿತು. ಒಮ್ಮೆ ಗಂಡಾಗಿ, ಮತ್ತೊಮ್ಮೆ ವಿರಹಿ ಹೆಣ್ಣಾಗಿ ಹೀಗೆ ವಿಭಿನ್ನ ವಿಭಿನ್ನ ನೆಲೆಗಳಲ್ಲಿ ನಿಂತು ಪ್ರೇಮವನ್ನು ಕುತೂಹಲದಿಂದ, ಉತ್ಸಾಹದಿಂದ, ಮೆಚ್ಚಿನಿಂದ, ರೊಚ್ಚಿನಿಂದ, ಅಸೂಯೆಯಿಂದ, ಬೆರಗಿನಿಂದ ಕಾಣುತ್ತ ಒಮ್ಮೊಮ್ಮೆಯೂ ಪ್ರೇಮದ ಪರಿಯ ಒಂದೊಂದು ಹೊಸ ಚಿತ್ರಣ ಕಟ್ಟಿಕೊಡುತ್ತ ಸಾಗುವ ಆ ಪತ್ರಗಳು ಭಾವುಕರನ್ನು ಕಟ್ಟಿಹಾಕಿಬಿಡುತ್ತವೆ. ಸ್ವತ: ಚಲಂ ಕೂಡ ಏನು ಕಮ್ಮಿ ಭಾವುಕರಾಗಿದ್ದರೆ? ಮೂರು ವರ್ಷದ ಮಗಳನ್ನು ಕೂರಿಸಿಕೊಂಡು, ಅವಳು ಬರುವುದಿಲ್ಲವೆಂದು ಗೊತ್ತಿದ್ದೂ, ಸರಿರಾತ್ರಿಯವರೆಗೆ ಅವಳ ಬರುವಿಕೆಗಾಗಿ ಕಾಯುತ್ತಾ ರೈಲ್ವೆ ಸ್ಟೇಷನ್ನಿನಲ್ಲಿ ಕೂತುಬಿಡುತ್ತಿದ್ದ ಪ್ರಸಂಗಗಳು ಅದೆಷ್ಟೋ. ಆಗೆಲ್ಲಾ ಅವರಿಗೆ ಮಗ ರವಿಯೇ ಗೆಳೆಯ. ಅವನಿಗೆ ತಮ್ಮ ಪ್ರೇಮದ ಕಥೆಯನ್ನು, ಪ್ರತೀಕ್ಷೆಯ ಕಥೆಯನ್ನು ಹೇಳುತ್ತಿದ್ದರು ಚಲಂ. ಎಲ್ಲ ಟ್ರೇನುಗಳೂ ಹೊರಟಾದ ಮೇಲೆ, ಜಾತ್ರೆಗೆ ಹೊರಟ ಹಳ್ಳಿಗ ಹೆಗಲ ಮೇಲೆ ಮಗನನ್ನು ಕೂರಿಸಿಕೊಂಡು ಹೋಗುವಂತೆ, ರವಿಯನ್ನು ಕೂರಿಸಿಕೊಂಡು ಆ ಕಥೆ ಈ ಕಥೆ ಹೇಳುತ್ತಾ ಅಡವಿಯೊಳಗಿನ ತಮ್ಮ ಏಕಾಂಗಿ ಮನೆಗೆ ಬಂದು ತಲುಪುತ್ತಿದ್ದರು. ಮಗ ರವಿ ಮಾತ್ರ ಅಪ್ಪ ಹೇಳುವ ಪ್ರತಿ ಪ್ರೀತಿಯ ಪ್ರಸಂಗಗಳನ್ನೂ ಆಸ್ಥೆಯಿಂದ ಕೇಳಿಸಿಕೊಳ್ಳುತ್ತಿದ್ದ. ಅವನಿಗೂ ಇದೆಲ್ಲವನ್ನು ತಿಳಿದುಕೊಳ್ಳುವುದು ಅವಶ್ಯವಿತ್ತು. ಏಕೆಂದರೆ ಚಲಂ ಸ್ಟೇಷನ್ನಿನಲ್ಲಿ ಕೂತು ನಿತ್ಯವೂ ಕಾಯುತ್ತಿದ್ದ ಹೆಂಗಸು ಬೇರಾರೂ ಆಗಿರದೆ ಇದೇ

ರವಿಯ ತಾಯಿಯಾಗಿದ್ದಳು. ಅಂದರೆ ಚಲಂರ ಹೆಂಡತಿ. ಹೌದು. ತಮಿಳ್ನಾಡಿಗೆ ಹೆಂಡತಿಯನ್ನು ಮೆಡಿಕಲ್ ಓದಲು ಕಳಿಸಿದ ಚಲಂರು ಮತ್ತೊಬ್ಬ ಹೆಂಡತಿಯೊಂದಿಗೆ ಇಲ್ಲಿ ವಾಸಿಸುತ್ತಲೇ ಮೆಡಿಕಲ್ ಓದಲು ಹೋದ ರಂಗನಾಯಕಮ್ಮನವರಿಗಾಗಿ ಕಾಯುತ್ತಿದ್ದರು. ಇದೆಲ್ಲ ವಿಚಿತ್ರವೆಂದು ರವಿಗೆ ಎಂದೂ ಅನಿಸಲೇ ಇಲ್ಲ. ರವಿಯ ಮಾತು ಬಿಡಿ: ಸ್ವತಃ ಚಲಂರಿಗೆ ಈ ನಿರೀಕ್ಷೆ ಅರ್ಥಹೀನವೆಂದಾಗಲೀ, ಹುಚ್ಚಿನಂತದ್ದು ಎಂದಾಗಲೀ ಎಂದೂ ಅನಿಸಲೇ ಇಲ್ಲ. ಹಾಗೆ, ನಡುರಾತ್ರಿ, ಕಾಯುವ ಕೆಲಸ ಮುಗಿಸಿಕೊಂಡು ಬಂದು ಮನೆ ಸೇರುತ್ತಿದ್ದರು ಚಲಂ ಎಂದೆನಲ್ಲ, ಆ ಮನೆಯ ಪರಿಕಲ್ಪನೆಯಾದರೂ ಎಷ್ಟು ಸೊಗಸಾದುದಂತೀರಿ? ಅವರ ಮನೆ ಅಡವೀಲಿ ದೂರ, ಒಬ್ಬಂಟಿಯಾಗಿ ನಿಂತ ಪಾಳು ಬಂಗಲೆಯಾಗಿತ್ತು. ಸುತ್ತ ಕಾಡು. ಕರೆಂಟಿನ ಮಾತೇ ಇಲ್ಲ, ಕಂದಿಲೇ ಬೆಳಕು. ಪಕ್ಕದಲ್ಲೇ ಗೋದಾವರಿ. ಮೇಲೆ ಪರಿಶುದ್ಧ ಆಕಾಶ. ರಾತ್ರಿಯಾದರೆ ವಿಧ ವಿಧದ ಕಾಡುಪ್ರಾಣಿಗಳ, ಹೆಸರು ಗೊತ್ತಿರದ ವಿಚಿತ್ರ ಪಕ್ಷಿಗಳ ಕೂಗುಗಳ ಮೆರವಣಿಗೆ.

ಬೆಳಗಾದರೆ ಹತ್ತು ಹರದಾರಿ ಕಾಲ್ನಡಿಗೆಯಲ್ಲೇ ಸಾಗಿ ಮೇಷ್ಟರಿಕೆ ಕೆಲಸ. ಹೌದು, ಚಲಂ ಎಲಿಮೆಂಟರಿ ಸ್ಕೂಲಿನ ಮೇಷ್ಟ್ರಾಗಿದ್ದರು. ಮಾಸ್ತರಿಕೆ ಮುಗಿಸಿಕೊಂಡು ಮನೆಗೆ ಬಂದರೆಂದರೆ,ಓದು, ಹೆಂಡತಿ 'ವ್ರೊಯ್ಯಿ' ಯೊಂದಿಗೆ ಹರಟೆ, ಮಕ್ಕಳೊಂದಿಗೆ ಆಟ, ಕಥೆ ಹೇಳುವುದು, ಕಥೆ ಬರೆಯುವುದು, ನೆನಪಾದರೆ ನಾಕು ಗೆಳೆಯರನ್ನು ಹುಡುಕಿಕೊಂಡು ಹೊರಟೇ ಬಿಡುತ್ತಿದ್ದರು. ಮಕ್ಕಳು ಜೊತೆ ಬರುತ್ತೇನೆಂದರೆ ಎಂದೂ ಬೇಡವೆಂದವರಲ್ಲ ಚಲಂ. ಅಂಥ ಅಪರಾತ್ರಿಯಲ್ಲೂ ಆ ಹುಡುಗರನ್ನು ಜೊತೆಮಾಡಿಕೊಂಡು ತಳ್ಳುಗಾಡಿಯಲ್ಲಿ ಕೂರಿಸಿಕೊಂಡು ಕರೆದೊಯ್ಯುತ್ತಿದ್ದರು. ಪಾಳು ಬಂಗಲೆ ಹತ್ತಿರ ಯಾರೋ ಬಿಟ್ಟು ಹೋಗಿದ್ದ ಆ ಕಸ ಹಾಕಿಕೊಂಡು ಹೋಗಲು ಬಳಸುವ ಕಬ್ಬಿಣದ ತುಕ್ಕು ಹಿಡಿದ ತಳ್ಳುಗಾಡಿಯನ್ನು ಅವರು ಬಳಸುತ್ತಿದ್ದುದು ಈ ಕೆಲಸಕ್ಕೆ. ಕೆಲವೊಮ್ಮೆ ಗೆಳೆಯರೂ ಇವರನ್ನು ಹುಡುಕಿಕೊಂಡು ಆ ಅಡವಿಯೊಳಕ್ಕೆ ಬರುತ್ತಿದ್ದುದುಂಟು. ಆಗೆಲ್ಲ ಚಲಂರ ಹೆಂಡತಿ 'ವ್ರೊಯ್ಯಿ' ಅವರಿಗೆಲ್ಲ ಅಡಿಗೆ ಮಾಡಿ ಹಾಕುವ ಕಾಯಕದಲ್ಲಿ ನಿರತರಾಗುತ್ತಿದ್ದರೆ, ಇವರೆಲ್ಲ 'ಇನ್ನೇನು ನೆಲಕ್ಕೊರಗುತ್ತದೆ' ಎಂಬ ಸ್ಥಿತಿಯಲ್ಲಿದ್ದ ಆ ಪುಟ್ಟ ಗುಡಿಸಲಿನಲ್ಲಿ ಚಿಮಣಿ ದೀಪ ಹಚ್ಚಿಟ್ಟುಕೊಂಡು ಗಂಭೀರ ಚರ್ಚೆಗೆ ಕೂತುಬಿಡುತ್ತಿದ್ದರು. ರಾತ್ರಿ ಬೆಳಗಾನ ಮಾತೋ ಮಾತು. ನಡುನಡುವೆ ಚಹಾ, ಜೋಕು ಇತ್ಯಾದಿ. ಅಂಥ ಸಂಧರ್ಭಗಳಲ್ಲಿ ಎಲಿಫೆಂಟಾ ಬ್ರಾಂಡ್ ಸಿಗರೇಟುಗಳನ್ನು ಸೇದುತ್ತಿದ್ದುದು ಬಿಟ್ಟರೆ ಚಲಂರಿಗೆ ಸಿಗರೇಟಿನ ಬಗ್ಗೆ

ವ್ಯಾಮೋಹವಾಗಲೀ, ಬಿಡಿಸಿಕೊಳ್ಳಲಾಗದ ಚಟವಾಗಲೀ ಇರಲಿಲ್ಲ. ಆದರೆ ಚಲಂರೊಳಗೊಬ್ಬ ನಿತ್ಯ ತರುಣ ಇದ್ದ. ಚಲಂ ಬದುಕನ್ನು ಅತಿಯಾಗಿ ಪ್ರೀತಿಸಿದ ವ್ಯಕ್ತಿ. ಅವರ ಆತ್ಮಕಥೆಯಲ್ಲಿಯೇ ಹೇಳಿಕೊಳ್ಳುವಂತೆ ಕೆಲವೊಮ್ಮೆ ವ್ಯಾಮೋಹಗಳಿಗೆ ಸುಲಭದಲ್ಲಿ ಬಲಿಯಾಗುತ್ತಿದ್ದರಂತೆ. ಅವರಿಗೆ ಸ್ತ್ರೀಯರ ಬಗ್ಗೆ ಗೌರವವಿತ್ತು. ಅವರ ಬಗ್ಗೆ ಮಾತನಾಡುತ್ತಾ ಹೋದರೆ ಎಷ್ಟೊಂದು ಆಶ್ಚರ್ಯವಾಗುತ್ತದೆ ಗೊತ್ತಾ? ಅವರು ತಮ್ಮ ಎಲ್ಲಾ ಬರಹಗಳುದ್ದಕ್ಕೂ ಸ್ತ್ರೀಯರನ್ನು ಗೌರವದಿಂದ ಸಂಭೋಧಿಸುತ್ತಾರೆ. ರಂಗನಾಯಕಮ್ಮಗಾರು, ಲೀಲಗಾರು, ವೊಯ್ಯಿಗಾರು ಅಂತಲೇ ಪ್ರತಿ ಸಂದರ್ಭಗಳಲ್ಲೂ ಚಲಂರ ಕಲಮು ಮಾತನಾಡುತ್ತದೆ. ಅಷ್ಟು ಮಾತ್ರ ಗೌರವವಿರುವುದರಿಂದಲೇ ರಂಗನಾಯಕಮ್ಮನನ್ನು ತಮಿಳುನಾಡಿನಲ್ಲಿ ಏಕಾಂಗಿಯಾಗಿ ಬಿಟ್ಟು ಮೆಡಿಕಲ್ ಓದಿಸಿದರು ಚಲಂ. ಮುಂದೆ ವಿಜಯವಾಡದಲ್ಲಿ ಬಂದು ತಾವು ಮೇಷ್ಟ್ರಾಗಿ, ಹೆಂಡತಿ ಡಾಕ್ಟರಾಗಿ ಕೈತುಂಬ ಹಣ ಓಡಾಡಿದಾಗ ಕೂಡ ಚಲಂ ಶ್ರೀಮಂತಿಕೆಯ ಬದುಕನ್ನೇ ಬಾಳಲೇ ಇಲ್ಲ. ಆಗೆಲ್ಲ ಗಂಡ ಬಿಟ್ಟವರು, ಅತ್ತೆಯೊಂದಿಗೆ ಜಗಳವಾಡಿ ಬಂದವರು, ಗಂಡನ ಮೇಲೆ ಮುನಿಸುಮಾಡಿಕೊಂಡವರು ಮುಂತಾದ ಇಂಥವರ ಒಂದು ದಂಡಿಗೆ ಅವರ ಮನೆಯ ಮೊಗಸಾಲೆಯೇ ಆಶ್ರಯದಾಣ. ಚಲಂ ಅವರಿಗೆಲ್ಲ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ, ಪುರುಷನಿಗೆ ಅಗತ್ಯವಾಗಿ ಬೇಕಾಗಿರುವ ಸ್ತ್ರೀ ಗೌರವದ ಬಗ್ಗೆ ತಿಳಿಹೇಳುತ್ತಿದ್ದರು, ಬೋಧಿಸುತ್ತಿದ್ದರು, ಅಪ್ಪಟ ಯೋಗಿಯಂತೆ. ಆ ಹೊತ್ತಿಗಾಗಲೇ ಚಲಂ ಸಾಹಿತ್ಯ ಲೋಕದ ಸ್ಟಾರ್ ಆಗಿ ರೂಪುಗೊಂಡಿದ್ದರಲ್ಲದೆ ಅವರ ಬರಹಗಳು ಸಕಲಾಂಧ್ರ ಓದುಗ ವರ್ಗದ ಮೇಲೆ ಮೋಡಿ ಮಾಡಿಹಾಕಿದ್ದವು. ಇತರೆ ಮಡಿವಂತ ಸಾಹಿತಿಗಳೆಲ್ಲ ಒಂದೆಡೆ ಸೇರಿ ಚಲಂರ ಜನಪ್ರಿಯತೆಯನ್ನು ಸಹಿಸಲಾಗದೆ ಚಡಪಡಿಸಿದ್ದರಲ್ಲದೆ, ಸಂಪ್ರದಾಯ ವಿರೋಧಿ ನಿಲುವುಗಳನ್ನು ತಳೆಯುತ್ತಾ, ಬರೆಯುತ್ತಾ ಬರೆಯುತ್ತಾ ಈ ಚಲಂ ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡುವುತ್ತಿದ್ದಾನೆ ಎಂದು ಬೊಬ್ಬೆ ಹೊಡೆಯುತ್ತಿದ್ದರು. ಆದರೆ ಚಲಂ ಮಾತ್ರ ಎಂದೂ ತಮ್ಮ ಓರಗೆಯ ಬರಹಗಾರರ ಅಸೂಯೆ ಬಗ್ಗೆಯಾಗಲೀ, ತಮ್ಮ ಮೇಲಿನ ಓದುಗರ ಪ್ರೀತ್ಯಾಭಿಮಾನಗಳ ಬಗ್ಗೆಯಾಗಲೀ ಅಸಲು ಒಂದೇ ಒಂದು ಮಾತಾಡಲಿಲ್ಲ. ಅವರಿಗಷ್ಟು ಪುರಸೊತ್ತೂ ಇರಲಿಲ್ಲ. ಸದಾಕಾಲವೂ ಚಿಂತನೆಯಲ್ಲಿ ತೊಡಗಿರುತ್ತಿದ್ದ ಚಲಂ, ಪ್ರೇಮ, ಮಾನವ ಸಂಬಂಧಗಳು, ಲೋಕರೂಢಿ, ಶಿಕ್ಷಣ ವ್ಯವಸ್ಥೆ, ಧರ್ಮ ಎಲ್ಲವುಗಳ ಬಗ್ಗೆ ಬರೆದರು. ಅವರ 'ಬಿಡ್ಡಲ ಶಿಕ್ಷಣ' ಎಂಬ ಪುಸ್ತಕವಂತೂ ಆಂಧ್ರದ ಶಿಕ್ಷಣ ಕ್ಷೇತ್ರದಲ್ಲಿ ಒಂದು

ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿಬಿಟ್ಟಿತು. ಮಕ್ಕಳಿಗೆ ಈ ನಾಲ್ಕು ಗೋಡೆಗಳ ನಡುವಿನ ಶಿಕ್ಷಣವನ್ನು ಕೊಡಲೇ ಬಾರದು. ಅಸಲಿಗೆ ಮಗುವಿಗೆ ಶಿಕ್ಷಣವೆಂಬ ಚೌಕಟ್ಟೇ ಇರಬಾರದು. ಅದು ತನ್ನಷ್ಟಕ್ಕೆ ತಾನೇ ಆಡಿಕೊಂಡು, ಹಾಡಿಕೊಂಡು, ಕಲಿಯುತ್ತಾ ಬೆಳೆಯುತ್ತದೆ. ಬಂಧನ ಮತ್ತು ಭಯಗಳ ನಡುವೆ ಯಾವ ಕಲಿಕೆಯೂ ಯಶಸ್ವಿಯಾಗಲಾರದು ಎಂಬುದು ಚಲಂರ ನಿಲುವಾಗಿತ್ತು. ಹೀಗಾಗಿ ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲೇ ಇಲ್ಲ. ಸ್ವತಃ ಮೇಷ್ಟ್ರಾಗಿದ್ದರೂ ಚಲಂರಿಗೆ ಶಿಕ್ಷಣ ವ್ಯವಸ್ಥೆಯ ಬಗ್ಗೆ ತೀವ್ರವಾದ ಅಸಮಾಧಾನವಿತ್ತು. ಮಾಸ್ತರಿಕೆ ಬಗ್ಗೆಯಂತೂ ಜಿಗುಪ್ಸೆಯಿತ್ತು. ಅಸಹ್ಯವಿತ್ತು, ಒಂದು ರೀತಿಯ ಹೇವರಿಕೆಯಿತ್ತು. ಆತ್ಮಚರಿತ್ರೆಯಲ್ಲಿ ಒಂದು ಕಡೆ ಅವರೇ ದಾಖಲಿಸುತ್ತಾರೆ–"ಪ್ರೈಮರಿ ಸ್ಕೂಲ್ ಮಾಸ್ತರಿಕೆ ಎಂದರೆ ಕ್ರಿಯಾಶೀಲನೊಬ್ಬನಲ್ಲಿಯ ಎಲ್ಲ ಸೃಜನಶೀಲ ಶಕ್ತಿಯನ್ನು ತಿಂದು ಹಾಕಿಬಿಡಬಲ್ಲ ಗುಮ್ಮ" ಎಂದು. ಆದರೆ ಚಲಂ ಮಕ್ಕಳಿಗೆ ಬದುಕುವುದನ್ನು, ಕ್ಷಣಗಳು ಸಾಯುವ ಮೊದಲೇ ಅವುಗಳನ್ನು ಅನುಭವಿಸುವ ಕಲೆಯನ್ನು ಕಲಿಸಿದರು. ಅಡವೀಲಿ ಇರುತ್ತಿದ್ದ ದಿನಗಳಲ್ಲಿ ರಜೆ ಸಿಕ್ಕರೆ ಸಾಕು, ಮಕ್ಕಳನ್ನು ಕರೆದುಕೊಂಡು ತಾವೇ ಕೈಯಾರೆ ತಯಾರಿಸಿದ ಅಡುಗೆಯ ಬುತ್ತಿ ಕಟ್ಟಿಕೊಂಡು, ತಮ್ಮ ಸ್ವಂತ ತೆಪ್ಪದಲ್ಲಿ ಕೂತು ನದಿಯ ಆಚೆ ದಡಕ್ಕೆ ಹೋಗಿಬಿಡುತ್ತಿದ್ದರು. ತೆಪ್ಪ ನೀರಲ್ಲಿ ಮಕ್ಕಳನ್ನು ಕೂರಿಸಿಕೊಂಡು ತೇಲುತ್ತಾ ಹೋಗುತ್ತಿದ್ದರೆ, ಚಲಂ ಅದನ್ನು ತಳ್ಳುತ್ತಾ , ಹಾಡುತ್ತಾ ಈಜು ಬೀಳುತ್ತಿದ್ದರು. ದಡದವರೆಗೆ, ಅಲ್ಲಿ ನಿರ್ಜನ ತೀರದಲ್ಲಿ ಮಕ್ಕಳೊಂದಿಗೆ ಮಕ್ಕಳಾಗಿ ಮರಳಿನಲ್ಲಿ ಮನೆ ಕಟ್ಟಿ, ಹಾಡುವ ಹಕ್ಕಿಗಳನ್ನು ಅಣಕಿಸಿ, ಮೀನು ಹಿಡಿದು ಹುರಿದು ತಿಂದು, ಓಡಾಡಿ, ಆಟವಾಡಿ, ಇನ್ನೇನು ಸೂರ್ಯ ಮುಳುಗೇಬಿಟ್ಟ ಎಂಬಷ್ಟು ಹೊತ್ತಾದಾಗ ದಣಿದ ದೇಹದೊಂದಿಗೆ ಮನೆಗೆ ಮರಳುತ್ತಿದ್ದರು ಚಲಂ. ಕುತೂಹಲದ ಸಂಗತಿ ಎಂದರೆ ಇಂಥ ಒಬ್ಬ, ಯಾವ ಕಟ್ಟುಪಾಡಿಗೂ ಸಿಲುಕದ, ಯಾರ ಅಂಕೆಗೂ ನಿಲುಕದ ಚಲಂ ಎಂಬ ಈ ವಿಕ್ಷಿಪ್ತ ವ್ಯಕ್ತಿ ಕರ್ನಾಟಕದ ಗಡಿಯಲ್ಲಿದ್ದ ತುಂಗಾ ತೀರದ ಪಂಡಿತ ತಾರಾನಾಥರ ಪ್ರೇಮಾಯತನದ ಹೆಸರು ಕೇಳಿದರೆ ಸಾಕು, ಸಂತೋಷದಿಂದ ಕೇಕೆ ಹಾಕುತ್ತಿದ್ದರು. ಎಲ್ಲೂ ಹೆಚ್ಚು ದಿನ ಉಳಿಯದ, ಚಲಂ 'ಪ್ರೇಮಾಯತನ'ಕ್ಕೆ ಬಂದರಂತೂ ದಿನಗಳ ಪರಿವೆಯನ್ನೇ ಮರೆತು ಬಿಡುತ್ತಿದ್ದರು. ತಾರಾನಾಥರೊಂದಿಗೆ ಮಾತಿಗೆ ಕೂರುವುದೆಂದರೆ ಚಲಂರಿಗೆ

ಇನ್ನಿಲ್ಲದ ಸಂಭ್ರಮ. ತಾರಾನಾಥರೆಂದರೆ ಚಲಂರಿಗೆ ವಿಶೇಷ ಪ್ರೀತಿ ಮತ್ತು ಕಾಳಜಿ.

ತಮ್ಮ ಜೀವಿತಾವಧಿಯಲ್ಲಿ ಹೊಸಪೇಟೆ, ಹುಬ್ಬಳ್ಳಿಗಳಿಗೂ ಭೇಟಿ ನೀಡಿದ ಚಲಂ ಬೆಂಗಳೂರಿನ ಚೆಲುವನ್ನು ಮನಸಾ ವರ್ಣಿಸಿ ದಾಖಲಿಸಿದ್ದಾರೆ. ಕರ್ನಾಟಕದ 'ಪ್ರೇಮಾಯತನ' ಆಶ್ರಮ ಬಿಟ್ಟರೆ ಚಲಂ ತುಂಬಾ ಇಷ್ಟಪಡುತ್ತಿದ್ದ ಸ್ಥಳ ತಮಿಳುನಾಡಿನ ಅರುಣಾಚಲಂ. ತಮ್ಮ ಜೀವನದ ಕೊನೆ ದಿನಗಳಲ್ಲಿ ಅರುಣಾಚಲಂನಲ್ಲಿ ನೆಮ್ಮದಿಯಿಂದ ಕಾಲ ಕಳೆದ ಚಲಂ, ತಮ್ಮದೇ ನೆಲ ಆಂಧ್ರದಲ್ಲಿ ತುಂಬಾ ಕಲಾವಿದರಿದ್ದಾರೆ, ಆದರೆ ಕಲೆಯೇ ಇಲ್ಲ ಅಂತೆಲ್ಲ ಆತ್ಮಚರಿತ್ರೆಯಲ್ಲಿ ಬರೆದುಕೊಂಡು ಹೋಗಿದ್ದಾರೆ ಚಲಂ. ಆತ್ಮಚರಿತ್ರೆ ಬರೆಯುವ ಹೊತ್ತಿಗಂತೂ ಚಲಂರಿಗೆ ಕಣ್ಣೆರಡೂ ಕಾಣಿಸದಂತಾಗಿ ಆರೋಗ್ಯ ತುಂಬಾನೇ ಹದಗೆಟ್ಟುಹೋಗಿತ್ತು. ಇನ್ನು ಆತ್ಮಚರಿತ್ರೆ ಬರೆಯುವುದಾಗದು ಎಂಬಂಥ ಪರಿಸ್ಥಿತಿ. ಆದರೆ ಚಲಂರ ಮಿತ್ರಗಣ ಬಿಡಬೇಕಲ್ಲ? ದೀಕ್ಷಿತುಲು, ವೆಂಕಟರಮಣ, ಜೀವನ್ ಮುಂತಾದವರು ಸೇರಿ "ನೀವು ಸುಮ್ಮನೆ ಹೇಳ್ತಾ ಹೋಗಿ ಸಾಕು, ಬರೆದುಕೊಳ್ಳೋಕೆ ಅಂತಲೇ ಒಬ್ಬ ಹುಡುಗ ಇರ್ತಾನೆ" ಅಂತ ದುಂಬಾಲು ಬಿದ್ದು ಬರೆಸಿದರು. ಹೀಗೆ ಹೇಳಬೇಕೆಂದರೆ ಅವರ ಉದ್ದೇಶವಾದರೂ ಏನಿತ್ತೆಂದರೆ–ಪ್ರತಿಯೊಂದರ ಬಗ್ಗೆಯೂ ನೇರ ನಿಷ್ಠೂರ ಅನಿಸಿಕೆಗಳನ್ನು ಹೇಳುತ್ತಲೇ ಬದುಕಿದ ಚಲಂ, ಒಂದು ವೇಳೆ ಆತ್ಮಚರಿತ್ರೆ ಬರೆಯುವಂತಾದರೆ ಅದು ಮತ್ತೊಂದು ಅರ್ಥದಲ್ಲಿ ಆಂಧ್ರದಲ್ಲಿ ಒಬ್ಬ ಸಾಹಿತಿಗಿರುವ ಸಾಮಾಜಿಕ ಸ್ಥಾನಮಾನ, ಸಾಹಿತಿಗಳಲ್ಲಿರುವ ಒಳಜಗಳಗಳು, ಗುಂಪುಗಾರಿಕೆ, ಆ ಕಾಲಘಟ್ಟದ ಸಾಹಿತ್ಯಿಕ ವಾತಾವರಣದ ಚಿತ್ರಣ ಇತ್ಯಾದಿ ಎಲ್ಲವನ್ನೂ ಒಂದೇ ಆಕರದಲ್ಲಿ ಹಿಡಿದಿಡುವಂಥ ಅಪೂರ್ವ ದಾಖಲೆಯಾದೀತೆಂಬ ಆಲೋಚನೆ. ಏಕೆಂದರೆ ಚಲಂರಲ್ಲಿ ಪ್ರತಿಯೊಂದನ್ನೂ ಆಳವಾಗಿ ನೋಡುವ, ಸರಿಯಾಗಿ ತಿಳಿದುಕೊಳ್ಳುವ, ನಿಜಾರ್ಥ ಗೂಢಾರ್ಥಗಳನ್ನು ಗ್ರಹಿಸುವ ಒಳನೋಟಗಳಿದ್ದವು. ಹಾಗೆಂದೇ ಅವರ ಅಭಿಪ್ರಾಯಗಳು ಹತ್ತರಲ್ಲಿ ಹನ್ನೊಂದಾಗಿರದೆ ತೀರ ವಿಭಿನ್ನವಾಗಿರುತ್ತಿದ್ದವು. ಒಬ್ಬ ಶಿಕ್ಷಕನಾಗಿ, ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಗುರುತರ ಜವಾಬ್ದಾರಿವುಳ್ಳ ಲೇಖಕನಾಗಿ, ಸಹಜವಾಗಿ ಶಿಕ್ಷಣದ ಹರಿಕಾರನಾಗಬೇಕಾಗಿದ್ದ, ಸಾಕ್ಷರತೆಯ ಪ್ರಚಾರಕರಾಗಬೇಕಾಗಿದ್ದ ಚಲಂ, ಶಿಕ್ಷಣವನ್ನು ನಡುಬೀದಿಯಲ್ಲಿ ನಿಂತು ಗೇಲಿ ಮಾಡಿದರು. ಇದರಲ್ಲೇನಿದೆ

ಸತ್ವ ಅಂತ ಲೋಕಕ್ಕೆ ಕೇಳಿಸುವಂತೆ ಪ್ರಶ್ನಿಸಿಬಿಟ್ಟರು. ಮಕ್ಕಳಿಗೆ ಶಿಕ್ಷಣವೆಂಬುದು ಬಂಧನದಂತೆ ಎಂದರು. ಶಿಕ್ಷಣವೆಂಬುದು ಶಾಲೆಯ ಮೂಲಕವೇ ಸಾಧ್ಯವಾಗುವ ಪ್ರಕ್ರಿಯೆ ಎಂಬ ಪರಿಕಲ್ಪನೆಯೇ ಅರ್ಥಹೀನ ಎಂದರು. ಶಾಲೆಗೆ ಹೋಗದೆ, ಸ್ವಚ್ಛಂದವಾಗಿ ಮಗು ಹಕ್ಕಿಯಂತೆ- ತನಗೆ ತೋಚಿದಂತೆ, ಆಸೆಯಾದಂತೆ ಬದುಕುತ್ತ, ಬದುಕಿನಿಂದ ನೇರವಾಗಿ ಪಾಠಗಳನ್ನು ಕಲಿಯುವುದಿದೆಯಲ್ಲ, ಅದು ಕಣ್ರಯ್ಯ ನಿಜವಾದ ಶಿಕ್ಷಣ; ಮಕ್ಕಳು ಅದನ್ನು ಕಲಿಯಬೇಕಿದೆ ಎಂದುಬಿಟ್ಟರು. ಆ 'ಬಿಡ್ಡಲ ಶಿಕ್ಷಣ' ಎಂಬ ಚಿಕ್ಕ ಪುಸ್ತಕ, ಇಡೀ ಆಂಧ್ರದಲ್ಲಿ ದೊಡ್ಡ ಪರ-ವಿರೋಧಿ ಚರ್ಚೆಯ ಅಲೆಯನ್ನೇ ಎಬ್ಬಿಸಿದ್ದುದು ಎಷ್ಟು ಸತ್ಯವೋ, ವಿರೋಧಿ ಅಲೆಯೂ ತೀವ್ರವಾಗಿತ್ತೆಂಬುದೂ ಅಷ್ಟೇ ಸತ್ಯ. ಚಲಂರ ಪ್ರತಿಯೊಂದು ಕ್ರಾಂತಿಕಾರಿ ವಿಚಾರವೂ ಹೀಗೆ ವಿರೋಧವನ್ನೆದುರಿಸಿದರೂ ಅವರಿಗೆ ಅಪ್ರಿಯ ಸತ್ಯಗಳನ್ನು, ಪ್ರಾಮಾಣಿಕ ಅನಿಸಿಕೆಗಳನ್ನು ಹಾಗೆ ಹಾಗೇ ಹೊರಗೆಡಹಿಬಿಡುವ ಅಭ್ಯಾಸ ಮಾತ್ರ ಹೋಗಲಿಲ್ಲ. ವಿಚಿತ್ರವೆಂದರೆ ಅವರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವ ವಿಚಾರದಲ್ಲಿ ಎಳ್ಳಷ್ಟೂ ಆಸಕ್ತಿಯಿರಲಿಲ್ಲವಾದರೂ ವಿಜಯವಾಡಕ್ಕೆ ಬಂದು ನೆಲೆಗೊಂಡ ಮೇಲೆ ಹೆಂಡತಿಯ ಒತ್ತಾಯದಿಂದಾಗಿ ಮಕ್ಕಳು ಕಾನ್ವೆಂಟ್ ಶಾಲೆಗೆ ಹೋಗಬೇಕಾಗಿ ಬಂದುದು. ಅಲ್ಲಿಯವರೆಗೆ ಏನೇನೂ ಕಲಿಯದೆ, ಯಾವ ಬಂಧನಗಳೂ ಇರದೆ ಸ್ವಚ್ಛಂದವಾಗಿ ತಿಂದು ತಿರುಗಿ ಅಭ್ಯಾಸವಾಗಿದ್ದ ಮಕ್ಕಳಿಗೆ ಆ ವಾತಾವರಣ ಒಗ್ಗಲಿಲ್ಲವಾಗಿ ಮುಂದೆ ಅವರು ರಂಗನಾಯಕಮ್ಮನವರ ನಿರೀಕ್ಷೆಯ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಲಾಗಲೇ ಇಲ್ಲ. ಬಹುಶಃ ಇದೇ ಕಾರಣ ಇರಬೇಕು- ಕೊನೆಕೊನೆಗೆ ಚಲಂರ ಜೀವನದ ಸಂಧ್ಯಾಕಾಲದಲ್ಲಿ ಅವರ ಮಕ್ಕಳು ಬೀದೀಲಿ ನಿಲ್ಲಿಸಿ ಸಾವಿರಾರು ಜನರ ಮಧ್ಯೆ ಅಪ್ಪನ ಕೆನ್ನೆಗೆ ಬಾರಿಸಿದರು. ರಾಮಮೂರ್ತಿಯಂಥ ಗೆಳೆಯರು ದೂರವಾದರು. ಏನು ಏನೇ ಆದರೂ ಚಲಂ ಮಾತ್ರ ಕೊನೆ ಕ್ಷಣದವರೆಗೂ ಚಲಂ ಆಗೇ ಉಳಿದರು.

ಚಲಂ ಎಂಥ ವಿಕ್ಷಿಪ್ತ ಮನುಷ್ಯರಿದ್ದರೆಂದರೆ ಅವರು ತಮ್ಮ ಕುಟುಂಬವನ್ನು ಪೋಷಿಸುತ್ತಿದ್ದ ಶಿಕ್ಷಕ ವೃತ್ತಿಯನ್ನೂ ಕೂಡ ಪ್ರೀತಿಸುತ್ತಿರಲಿಲ್ಲ. ತಮಗಿದ್ದ ಅಗಾಧ ಓದಿನ ಹಿನ್ನಲೆಯ ಬಗ್ಗೆಯಂತೂ ಅವರಿಗೆ ವಿಪರೀತ ಅಸಮಾಧಾನವಿತ್ತು. ಯಾಕಾದರೂ ನಾನು ಇಷ್ಟೆಲ್ಲ ಓದಿಕೊಂಡೆನೋ ಎಂದು ಅವರು ಕೈಕೈ ಹಿಸುಕಿಕೊಳ್ಳುತ್ತಿದ್ದುದೂ ಉಂಟು.

ಒಮ್ಮೆ ಪತ್ರಕರ್ತನೊಬ್ಬ ಅವರನ್ನು ಸಂದರ್ಶಿಸುತ್ತ ನಿಮ್ಮ ಬರಹಗಳಲ್ಲಿ ಕಾಣಸಿಗುವ ಈ ಭಾವತೀವ್ರತೆಗೆ ಕಾರಣ ನಿಮ್ಮ ಅಗಾಧ ಓದಿನ ಹಿನ್ನಲೆಯೆ ಇರಬೇಕು ಅಲ್ಲವೇ ಎಂದಾಗ ಚಲಂ ದೀರ್ಘವಾದ ನಿಟ್ಟುಸಿರುಬಿಟ್ಟು ಹೇಳಿದ್ದರು: ಖಂಡಿತ ಅಲ್ಲ. ಓದಿದ್ದರಿಂದಾಗಿಯೇ ನನ್ನ ಬರಹಗಳು ಜಾಳುಜಾಳಾಗಿವೆ ಎನಿಸುತ್ತದೆ. ಓದದೆ ಇದ್ದರೇನೇ ನಾನು ಇನ್ನಷ್ಟು ಮತ್ತಷ್ಟು ಒಳ್ಳೆಯ ಕಥೆಗಳನ್ನು ಬರೆಯಬಹುದಾಗಿತ್ತು. ಆಗಲೇ ಹೇಳಿದಂತೆ ಚಲಂ ಬದುಕನ್ನು ತುಂಬಾ ಪ್ರೀತಿಸುತ್ತಿದ್ದರು. ಪ್ರತಿ ಕ್ಷಣವನ್ನು ಹಸಿದವರಂತೆ ಅನುಭವಿಸುತ್ತಿದ್ದರು. ನದಿಯಲ್ಲಿ ಈಜಾಡುವ, ತೆಪ್ಪ ಕಟ್ಟಕೊಂಡು ಮೀನು ಹಿಡಿಯಲು ಹೋಗುವ, ಗೋದಾವರಿಯ ತೀರಕ್ಕೆ ಹೋಗಿ ಮಕ್ಕಳೊಂದಿಗೆ ಮನದಣಿಯೆ ಆಟವಾಡುವ, ಅಡವಿ ಮಧ್ಯೆಯಿದ್ದ ಒಂಟಿ ಗುಡಿಸಿಲಿನಲ್ಲಿ ಮಿತ್ರರನ್ನು ಕಲೆಹಾಕಿಕೊಂಡು ರಾತ್ರಿ ಚರ್ಚಿಸುವ, ಮುಳಗುವ ಸೂರ್ಯನನ್ನು, ಬೆಳಗುವ ಚಂದ್ರನನ್ನು ಕೂಡಾ ಮುಗ್ಧ ಮಗುವಿನಂತೆ ನೋಡುತ್ತಾ ಕೂತುಬಿಡುವ... ಹೀಗೆ ಏನೆಲ್ಲವನ್ನು ಮಾಡುತ್ತಿದ್ದ ಚಲಂ ಎಂಬ ಅತಿಭಾವುಕನ ಕಥೆ ಕೇಳಿಯೇ ಬಸವರಾಜು ಎಂಬ ಸಬ್ ರಿಜಿಸ್ಟ್ರಾರು ನೌಕರಿಯನ್ನೇ ತೊರೆದು ಇವರ ಹಿಂದೆ ನಡೆದು ಬಂದುಬಿಟ್ಟಿದ್ದ. ನಿಜವಾದ ಸ್ವಾತಂತ್ರ್ಯ ಮತ್ತು ಸಂತೋಷಗಳೆಂದರೆ ನೀವು ಅನುಭವಿಸುತ್ತಿರುವಂತಹದು. ನನಗೆ ಎಲ್ಲ ಇದೆ ಆದರೆ ಈ ಎಲ್ಲ ಇಲ್ಲ, ಅದಕ್ಕೆ ನಾನು ನೌಕರಿ ಬಿಟ್ಟು ನಿಮ್ಮ ಹಿಂದೆ ಇರಲು ಬಂದೆ ಎನ್ನುತ್ತಾ ಬಂದುಬಿಟ್ಟಿದ್ದ. ಚಲಂ ಬಸವರಾಜುಗೆ ತುಂಬ ತಿಳಿಸಿಹೇಳಿದ್ದರು. ಸ್ವಾತಂತ್ರ್ಯ ಮತ್ತು ಸಂತೋಷವನ್ನು ನೀನು ಸರಿಯಾಗಿ ಅರ್ಥೈಸಿಕೊಂಡಿಲ್ಲ ಅಷ್ಟೆ. ಅವು ಬದುಕಿನಲ್ಲಿಲ್ಲ. ಅರಸಿಕೊಂಡು ಹೋಗಿ ಅನುಭವಿಸುವುದರಲ್ಲಿದೆ. ನೀನು ಜನರ ಮಧ್ಯೆ ಬದುಕಿಯೇ ನನ್ನಷ್ಟೇ ತೀವ್ರವಾಗಿ ಈ ಎಲ್ಲವನ್ನೂ ಅನುಭವಿಸಬಹುದು. ಅವಸರಪಡಬೇಡ, ಮುಂದೆ ನೀನು ಪಶ್ಚತ್ತಾಪ ಪಟ್ಟುಕೊಂಡರೆ ಹೋದ ನೌಕರಿ ಮತ್ತೆ ಬರುವುದಿಲ್ಲ... ಮುಂತಾಗಿ. ಅದಾವುದನ್ನೂ ಕೇಳದ ಬಸವರಾಜು ಮೋಡಿಗೊಳಗಾದವನಂತೆ ನೌಕರಿಯನ್ನು ಬಿಟ್ಟು ಬಂದು ಕೊನೆಗೆ ಚಲಂರಂತೆ ಬದುಕಲು ಆಗದೆ ಕ್ರೈಸ್ತ ಧರ್ಮದ ಪ್ರಚಾರಕನಾಗಿ ಹೋಗಿಬಿಟ್ಟ. ಚಲಂರ ಬದುಕೆಂಬುದು ಹೀಗೆ ನೋಡುಗರ ಕಣ್ಣುರಿಸುವ ಹಬ್ಬದಂತಿತ್ತು ಎಂದು ಬೇರೆಹೇಳಬೇಕಿಲ್ಲವಲ್ಲ !

ಇನ್ನು ಚಲಂರ ಭಾಷೆಗಿರುವ ಮೋಡಿ ಮಾಡುವ ಶಕ್ತಿಯನ್ನಂತೂ

ಯಾವನೂ ಒಪ್ಪಿಕೊಳ್ಳಬೇಕು. ಚಲಂರ ಬರಹವೆಂದರೆ ಅದೊಂದು ಸಂಗೀತ. ಅವರ ಬರಹದ ತೆಕ್ಕೆಗೆ ಬಿದ್ದ ಯಾವ ಓದುಗನೂ ಅರ್ಧಕ್ಕೆ ನಿಲ್ಲಿಸಲಾರ. ಅದು ಎಲ್ಲಿಯೂ ನಿಲ್ಲದ ರಭಸ ಪ್ರವಾಹ. ಭಾವನೆಗಳ ಸಮತೀಲಿತ ಓಘ ಕಾಯ್ದುಕೊಂಡು ಹರಿವ ಬರಹದ ನದಿ. ಒಂದು ಕಾಲಕ್ಕಂತೂ ಚಲಂರಂತೆ ನಮಗೆ ಬರೆಯಲು ಸಾಧ್ಯವಿಲ್ಲವೇ ಇಂದು ಚಡಪಡಿಸುತ್ತಿದ್ದ ಒಂದು ವರ್ಗವೇ ಇತ್ತೆಂಬುದು ಅತಿಶಯದ ಮಾತಲ್ಲ. ವಿಪರ್ಯಾಸವೆಂದರೆ ಆಂಧ್ರದಲ್ಲಿ ಚಲಂರಿಗೆ ಒಬ್ಬ ಬರಹಗಾರನಾಗಿ ಸಿಗಬೇಕಾದ ಯಾವ ಮನ್ನಣೆಯೂ ಸಿಗಲಿಲ್ಲ. ಅವರನ್ನು ಸ್ತ್ರೀ ಲೋಲುಪನಾಗಿ, ವಿಕ್ಷಿಪ್ತನಾಗಿ ಆಂಧ್ರದೇಶ ಗ್ರಹಿಸಿತೇ ಹೊರತು ಅವರೊಳಗಿನ ಅದ್ಭುತ ಬರಹಗಾರನ್ನು ಗುರುತಿಸಿ ಪುರಸ್ಕರಿಸಲೇ ಇಲ್ಲ.

ಮೇಷ್ಟ್ರಾಗಿದ್ದಾಗೊಮ್ಮೆ ಚಲಂರಿಗೆ ಟ್ರಾನ್ಸಫರ್ ಆಗಿತ್ತು. ಅದನ್ನು ಕ್ಯಾನ್ಸಲ್ ಮಾಡಿಸಿಕೊಳ್ಳಬೇಕೆಂದು ಓಡಾಡುತ್ತಿದ್ದ ಚಲಂ ಟ್ರಾನ್ಸ್‌ಫರ್‌ನ ಕ್ಯಾನ್ಸಲಾತಿಗಾಗಿ ನೀಡಬೇಕಾದ ಕಾರಣಗಳ ಜಾಗೆಯಲ್ಲಿ ನನಗೆ ಈ ಊರು, ಇಲ್ಲಿಯ ಜನ, ಪರಿಶುಭ್ರ ಆಕಾಶ, ನದಿ ತೀರದ ನೆಲ, ಬೆಟ್ಟದ ಮೇಲಿನ ಗುಡಿ, ಅದರ ಹಿಂದೆ ಕಾಣಿಸುವ ಸೂರ್ಯೋದಯ–ಸೂರ್ಯಾಸ್ತಗಳೆಂದರೆ ತುಂಬಾ ಇಷ್ಟ. ಅವುಗಳನ್ನು ಬಿಟ್ಟು ಹೋಗೋಕೆ ಮನಸಾಗ್ತಾ ಇಲ್ಲ ಅಂತ ಬರೆದಿದ್ದರು. ಯಾಕೆ ಎಲ್ಲ ನೌಕರಿದಾರರು ವರ್ಗ ಕ್ಯಾನ್ಸಲ್ ಮಾಡಿಸಿಕೊಳ್ಳಬೇಕಾದಾಗ ಮಕ್ಕಳ ಶಿಕ್ಷಣ, ಹೆಂಡತಿಯ ಅನಾರೋಗ್ಯಗಳ ಕಾರಣಗಳನ್ನೇ ಕೊಡ್ತಾರೆ? ಸರ್ಕಾರವೂ ಯಾಕೆ ಇಂಥ ಕಾರಣಗಳನ್ನೇ ಪರಿಗಣಿಸುತ್ತೆ ಮತ್ತು ಬಯಸುತ್ತೆ? ಎಂದು ಕೇಳುತ್ತಿದ್ದರು ಚಲಂ.

ಚಲಂ ಬದುಕಿನ ಬಗ್ಗೆ ಹೇಳುತ್ತಾ ಹೋದರೆ, ಅದು ಮುಗಿಯುವುದಿಲ್ಲ. ವೈಕಂ, ಚಲಂ, ಈ ಸಾಲಿಗೆ ಸೇರಿಸಲು ಅದ್ಯಾಕೋ ಕನ್ನಡದಿಂದ ಒಂದು ಹೆಸರೂ ತೋಚುತ್ತಿಲ್ಲವಾದರೂ ತಕ್ಕಮಟ್ಟಿಗೆ ಪಂಪ ಮತ್ತು ಕೈಲಾಸಂರ ಬದುಕುಗಳು ಅವರ ಬದುಕಿನ ಗಡಿಯ ಹತ್ತಿರ ಹತ್ತಿರದಲ್ಲೇ ಇರುವಂತೆ ಗೋಚರಿಸುವುದಂತೂ ದಿಟ.

–ಚಿದಾನಂದ ಸಾಲಿ ಸಿರಿವಾರ, ರಾಯಚೂರು ಜಿಲ್ಲೆ.

(‘ಹೊಸತು’ ಸಾಭಾರ)

* * *

ಮತಾಂತರ: ಗಾಂಧೀಜೀ ದೃಷ್ಟಿ

–ಕೆ.ಎಸ್.ನಾರಾಯಣಸ್ವಾಮಿ.

(ಟಿಪ್ಪಣಿ: ಈ ಲೇಖನದ ಲೇಖಕರು ಗಾಂಧೀಜೀ ವಿಚಾರ ತಜ್ಞರು. ಅವರು ಮೃತರಾಗಿ ಒಂದು ವರ್ಷವಾಯಿತು. ಅವರ ನೆನಪಿನಲ್ಲಿ ಈ ಲೇಖನ ಪ್ರಕಟಗೊಂಡಿದೆ.)

ರೆವರೆಂಡ್ ಸಿ.ಎಫ್.ಆಂಡ್ರೂಸ್ ಭಾರತಕ್ಕೆ ಕ್ರೈಸ್ತ ವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಬಂದ ಸಂತ. ಟ್ಯಾಗೋರರ ಶಾಂತಿನಿಕೇತನದಲ್ಲಿ ಆಚಾರ್ಯರಾಗಿ ಕೊನೆಯ ದಿನದವರೆಗೂ ಕೆಲಸ ಮಾಡುತ್ತಿದ್ದರು. ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಗಾಂಧೀಜೀಯ ನೆಚ್ಚಿನ ಅನುಯಾಯಿಯಾಗಿ ಶ್ರಮಿಸಿ ಸತ್ಯಾಗ್ರಹದ ಅಹಿಂಸಾಪಥಕ್ಕೆ ಒಲಿದು ಬಂದು, ದೀನ ಬಂಧು ಆಂಡ್ರೂಸ್ ಎಂದೇ ಪ್ರಸಿದ್ಧರಾದರು. ಆಂಡ್ರೂಸರು ಗಾಂಧೀಜೀ ಮಾರ್ಗದ ಮಾನವೀಯ ಮೌಲ್ಯಗಳನ್ನು ಗೌರವಿಸಿ ಅನುಷ್ಠಾನ ಮಾಡಿದರು. ಕ್ರಿಸ್ತನ ಉಪದೇಶಗಳ ಆಚಾರ ಸಂಹಿತೆಯನ್ನು ಸತ್ಯಾಗ್ರಹಜೀವನ ವಿಧಾನದಲ್ಲಿ ಕಂಡವರು. ಆಜನ್ಮ ಖಾದಿಧಾರಿಗಳಾಗಿ ಮೂವತ್ತು ವರ್ಷಗಳಿಗೂ ಮೀರಿ ಭಾರತದ ಸ್ವಾತಂತ್ರ್ಯ ಯೋಧರ ಅತಿ ನಿಕಟ ಮಾರ್ಗದರ್ಶಕರಲ್ಲಿ ಒಬ್ಬರೆನಿಸಿ, ಸ್ವಾತಂತ್ರ್ಯ ಪೂರ್ವವೇ ನಿಧನರಾದರು. ಕೊನೇ ದಿನಗಳಲ್ಲಿ ಕಲ್ಕತ್ತೆಯ ಆಸ್ಪತ್ರೆಯಲ್ಲಿ ರೋಗಪೀಡಿತರಾಗಿದ್ದಾಗ ಗಾಂಧೀಜೀ ಆಸ್ಪತ್ರೆಗೆ ಭೇಟಿ ಕೊಟ್ಟರು. ಅತ್ಯಂತ ಸಮಾಧಾನದಿಂದ ಆಂಡ್ರೂಸರು 'ಬಾಪೂ, ನನಗೆ ಶಾಂತಿ ಲಭಿಸಿದೆ. ಬ್ರಿಟೀಷ್ ಸಾಮ್ರಾಜ್ಯಶಾಹಿ ಇಲ್ಲದ ಸ್ಥಳಕ್ಕೆ ತೆರಳುತ್ತಿದ್ದೇನೆ. ದಾಸ್ಯವಿಮೋಚನೆಯಾಗುತ್ತಿದೆ' ಎಂದರು. 'ಎಂಥ ಪುಣ್ಯಾತ್ಮ' ಎಂದರು ಬಾಪೂ.

ಖಾನ್ ಅಬ್ದುಲ್ ಗಫಾರ್ ಖಾನ್ ಗಾಢವಾದ ಧರ್ಮಶ್ರದ್ಧೆಯಿಂದ ಬಾಳಿ ಬದುಕಿದ ಇನ್ನೊಬ್ಬ ಸಂತ ಶ್ರೇಷ್ಠ. ಗಡಿನಾಡಿನ ಗಾಂಧೀಜೀ ಎಂದೇ ಹೆಸರಾದ ವೀರ ಸತ್ಯಾಗ್ರಹಿ. ಇಸ್ಲಾಂ ಧರ್ಮದ ಶಾಂತಿ ಸೌಹಾರ್ದಗಳ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಬೇಕೆಂಬ ಗಾಢ ನಂಬಿಕೆಗಳಂತೆ

ಬಾಳಿದ ಆದರ್ಶ ಮುಸಲ್ಮಾನ್ ಎನಿಸಿಕೊಂಡ ಗಫಾರ್ ಖಾನ್ ಪಾಕೀಸ್ತಾನ ರಚನೆಯನ್ನು ವಿರೋಧಿಸಿದ ಏಕೈಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ.

ಇವರಿಬ್ಬರೂ ೧೯೩೬ರಲ್ಲಿ ಗಾಂಧೀಜೀಯ ಸೇವಾಶ್ರಮಕ್ಕೆ ಬಂದಾಗ ಧಾರ್ಮಿಕವಾಗಿ ಮತಾಂತರ ಸಮಸ್ಯೆಯ ಬಗ್ಗೆ ಗಂಭೀರ ಸಂವಾದದಲ್ಲಿ ತೊಡಗಿದರು. ಗಾಂಧೀಜೀಯಂತೂ ಹಿಂದೂ ಧರ್ಮದ ಅತ್ಯಂತ ಶ್ರದ್ಧಾವಂತ ಅನುಯಾಯಿಯಾಗಿ ಅಚಲವಾಗಿ ನಿಂತವರು. ಈ ಮೂವರ ಸಂವಾದವನ್ನು ಗಾಂಧೀಜೀಯ ಕಾರ್ಯದರ್ಶಿ ಮಹದೇವ ದೇಸಾಯಿ ವಿವರವಾಗಿ ತಮ್ಮ ಒಂದು ಕೃತಿಯಲ್ಲಿ ದಾಖಲಿಸಿದ್ದಾರೆ. ಇಂದು ಆ ಸಂವಾದ ನಮಗೆ ಅತ್ಯಂತ ಪ್ರಸ್ತುತ. ಆ ಕಾಲಕ್ಕೆ ಅವರನ್ನು ಕ್ರೈಸ್ತ ಧರ್ಮಕ್ಕೆ ಧರ್ಮಾಂತರಗೊಳಿಸುತ್ತಿದ್ದಾರೆ ಎಂಬ ವಿವಾದ ದೇಶದಲ್ಲಿ ನಡೆಯುತ್ತಿತ್ತು.

ಆಂಡ್ರೂಸರು ಗಾಂಧೀಜೀಯನ್ನು ಕೇಳಿದರು.

'ನನ್ನನ್ನು ಪೂರ್ಣ ವಿಶ್ವಾಸಕ್ಕೆ ತೆಗೆದುಕೊಂಡು ನನ್ನ ಬಳಿ ಬಂದು ಒಬ್ಬ ಯುವಕ ತಾನು ಆಧ್ಯಾತ್ಮ ಸಾಧನೆಯ ಪಥ ಹುಡುಕುತ್ತಿದ್ದೇನೆಂದೂ ತನಗೆ ಮಾರ್ಗದರ್ಶನ ಮಾಡಬೇಕೆಂದೂ ಕೇಳಿದರೆ ಕ್ರೈಸ್ತಧರ್ಮವನ್ನೇ ನಂಬಿ ನಡೆಯುತ್ತಿರುವ ನಾನು ಆ ಮಾರ್ಗವನ್ನು ಮಾತ್ರವೇ ಸೂಚಿಸಬಲ್ಲೆ. ಆತ ಕ್ರೈಸ್ತ ಧರ್ಮವನ್ನೇ ಅಂಗೀಕರಿಸಿ ತನ್ನ ಮೋಕ್ಷ ಪಥ ಸಾಧಿಸುವೆನೆಂದರೆ ಏನು ಮಾಡಬೇಕು?.'

ಖಚಿತ ಧ್ವನಿಯಲ್ಲಿ ಬಾಪೂ : 'ಒಬ್ಬ ಕ್ರೈಸ್ತನಲ್ಲದ ಜಿಜ್ಞಾಸು ನಿಮ್ಮ ಬಳಿಗೆ ಬಂದಲ್ಲಿ ಆತನನ್ನು 'ನಿನ್ನ ಸ್ವಧರ್ಮದ ಬಗ್ಗೆ ನೀನೆಷ್ಟು ತಿಳಿದಿದ್ದೀ?' ಎಂದು ಕೇಳಿ, ಅವನಿಗೆ ಸಹಜವಾದ ಸ್ವಧರ್ಮದಲ್ಲಿ ನಿಂತು ಒಳ್ಳೆಯ ಸಾಧಕನಾಗು ಎಂದು ಹೇಳಬೇಕು. ಒಳ್ಳೇ ಹಿಂದುವೋ, ಮುಸಲ್ಮಾನನೋ, ಬೌದ್ಧನೋ ಆಗುವುದು ಒಳ್ಳೆಯದಲ್ಲದೆ ಮತಾಂತರದಲ್ಲಿ ಹೆಚ್ಚು ಲಾಭವಾಗಲಾರದು' ಎಂದರು.

ಆಂಡ್ರೂಸರಿಗೆ ಸಮಾಧಾನವಾಗಿರಲಿಲ್ಲ. ಹೀಗೆ ಕೇಳಿದರು:- 'ಈಗ ನಿಮ್ಮ ಮಗ ಮುಸಲ್ಮಾನನಾಗಿದ್ದಾನೆ. ಅವನನ್ನು 'ಆಕ್ಸ್‌ಫರ್ಡ್ ಗ್ರೂಪ್' ಎಂಬ ಕ್ರೈಸ್ತ ಪ್ರಚಾರಕ ಗುಂಪು ಪರಿವರ್ತನೆ ಮಾಡಿ ಅವನನ್ನು ದುಷ್ಟಚಾಳಿಗಳಿಂದ ಬಿಡಿಸುವುದಾದರೆ ಅದು ಉತ್ತಮವೆನಿಸುವುದಿಲ್ಲವೇ?'.

ಆ ಕಾಲಕ್ಕೆ ಆಕ್ಸಫರ್ಡ ಗ್ರೂಪ್ ಎಂಬ ಕ್ರೈಸ್ತ ಮತ ಪ್ರಚಾರಕರ ಗುಂಪು ಈ ದೇಶದಲ್ಲಿ ಪ್ರಬಲವಾದ ಚಳುವಳಿ ನಡೆಸುತ್ತಿತ್ತು. ಅನೇಕ ಹಿಂದೂ ಮುಖಂಡರೂ ಅದನ್ನು ಬೆಂಬಲಿಸುತ್ತಿದ್ದರು. ಒಳ್ಳೆಯ ಆಧ್ಯಾತ್ಮಿಕ ಪ್ರವೃತ್ತಿಗಳನ್ನು ಬೆಳೆಸಿ ಮಾನವನನ್ನು ಉತ್ತಮ ಗುಣಗಳ ವ್ಯಕ್ತಿಯನ್ನಾಗಿ ಮಾಡುವುದೇ ತಮ್ಮ ಉದ್ದೇಶ ಎಂದು ಈ ಪ್ರಚಾರಕರ ಗುಂಪು ಹೇಳಿಕೊಳ್ಳುತ್ತಿತ್ತು.

ಗಾಂಧೀಜೀಜಿ ಅಂದರು:-

'ಈ ಆಕ್ಸಫರ್ಡ ಗುಂಪು ಎಷ್ಟು ಜನರನ್ನು ಸಚ್ಛಾರಿತ್ರ್ಯರನ್ನಾಗಿ ಪರಿವರ್ತಿಸಿದರೂ ಸಂತೋಷವೇ. ಆದರೆ ಮತಾಂತರ ಮಾಡಬೇಕಾದ ಅವಶ್ಯಕತೆ ಇಲ್ಲ. ಅವರವರ ಸ್ವಧರ್ಮದಲ್ಲಿ ಉತ್ಕೃಷ್ಟ ಮೌಲ್ಯಗಳನ್ನು ಗುರುತಿಸಿ ಅದರಂತೆ ನಡೆದು ಉತ್ತಮರಾಗಲು ಮಾರ್ಗದರ್ಶನ ಮಾಡಬೇಕು. ಆಗ ಮಾತ್ರ ಅವರ ಸದ್ಗುಣಗಳು ತಾನಾಗಿ ಬೆಳೆಯುತ್ತವೆ. ನನ್ನ ಬಳಿಗೆ ಒಬ್ಬ ಬ್ರಾಹ್ಮಣ ಯುವಕ ಬಂದು ನನಗೆ ಆಂಡ್ರೂಸರ ಚಿಂತನೆಗಳು ಬಹಳ ಹಿಡಿಸಿವೆ ನಾನು ಕ್ರೈಸ್ತನಾಗಲೇ? ಎಂದು ಬೈಬಲ್ ಒಂದು ಉತ್ತಮ ಧರ್ಮ ಬೋಧೆಯ ಪುಸ್ತಕ ಎಂದು ಅಂಗೀಕರಿಸುವುದರಲ್ಲಿ ಏನು ಕಷ್ಟವಿದೆ? ಏಸುಕ್ರಿಸ್ತನೂ ಜಗತ್ತಿನ ಧಾರ್ಮಿಕ ಪ್ರವಾದಿಗಳಲೊಬ್ಬ ಎಂದು ಗೌರವಿಸಲು ನಿನ್ನ ಸಹಜ ಧರ್ಮದಲ್ಲಿ ಅವಕಾಶವಿರುವುದಿಲ್ಲವೇ? ಎಂದು ನಾನೇ ಕೇಳಿದೆನು.'' ಯಾವ ಮೂಲದಿಂದ ಬಂದರೂ ಮೂಲ ಉಪದೇಶಗಳು ಒಂದೇ ರೀತಿ. ಕ್ರಿಸ್ತನೂ ಪ್ರವಾದಿಗಳ ಸರಣಿಯಲ್ಲಿ ಬರುವ ಒಬ್ಬ ಗುರು ಎಂದು ನಾನೂ ಗೌರವಿಸುತ್ತೇನೆ. ನನಗೆ ಆಂತರ್ಯದಲ್ಲಿ ಕ್ಷೋಭೆ ಉಂಟಾದಾಗ ಬೈಬಲ್ಲಿಗಿಂತ ಭಗವದ್ಗೀತೆಯೇ ನನ್ನ ಆತ್ಮವನ್ನು ತಣಿಸಿತು.'

ಗಾಂಧೀಜೀಜಿಯ ದೃಷ್ಟಿಯಲ್ಲಿ ಇತರ ಧರ್ಮಗಳ ಬಗ್ಗೆ ಸಹಿಷ್ಣುತೆ ಇದ್ದರೆ ಸಾಲದು, ಅವುಗಳ ಬಗ್ಗೆ ಸಮಾನ ಗೌರವ, 'ಸರ್ವ ಧರ್ಮ ಸಮಭಾವ' ನಮ್ಮಲ್ಲಿ ಇದ್ದಾಗ ಮಾತ್ರವೇ ಸತ್ಯ ಅಹಿಂಸೆಗಳ ಸಂಸ್ಕೃತಿ ಸಾಧ್ಯ.

ಆಂಡ್ರೂಸರು ಖಾನ್ ಅಬ್ದುಲ್ ಗಫಾರ್ ಖಾನರ ಕಡೆಗೆ ತಿರುಗಿ 'ನೀವೇನ್ನನ್ನುತ್ತೀರಿ?' ಎಂದರು. ಖಾನರು ಇನ್ನು ದೃಢ

ಸಂಕಲ್ಪದವರಾಗಿದ್ದರು. 'ಜಗತ್ತಿಗೆಲ್ಲಾ ಒಂದೇ ಧರ್ಮ ಸಂಹಿತೆ ಯಾವಾಗಲೂ ಸಾಧ್ಯವೇ ಇಲ್ಲ. ಸರ್ವಧರ್ಮ ಸಮಾನತೆ ಮತ್ತು ಸಕಲ ಪ್ರವಾದಿಗಳ ಘನತೆಗಳನ್ನು ಮನುಷ್ಯ ಗೌರವಿಸಿದಾಗಲೇ ತನ್ನ ಧರ್ಮದ ನಿಜವಾದ ಅನುಯಾಯಿಯಾದಾನು. ನಮ್ಮ ನಮ್ಮ ಧರ್ಮವನ್ನು ನಾವೆಷ್ಟು ಗಂಭೀರವಾಗಿ ಅಧ್ಯಯನ ಮಾಡಿ ತಿಳಿದುಕೊಂಡಿದ್ದೇವೆ? ಅದರ ಮುಖ್ಯ ತತ್ವಗಳೇನು ಎಂದು ಗೊತ್ತೇ ಇರುವುದಿಲ್ಲ. ಮಾನವನ ಆಧ್ಯಾತ್ಮಿಕ ಆಕಾಂಕ್ಷೆಗಳೇ ಎಲ್ಲಾ ಧರ್ಮಗಳ ಮೂಲ. ಎಲ್ಲರೂ ಮುಸಲ್ಮಾನರಾಗಬೇಕೆಂಬ ಹುಚ್ಚು ಮುಸ್ಲೀಮರಿಗೇಕಿರಬೇಕು? ಜಗತ್ತಿಗೆಲ್ಲಾ ಕ್ರೈಸ್ತ ಅನುಯಾಯಿಯಾಗುವುದೇ ಮಾನವನ ಉದ್ಧಾರಕ್ಕೆ ದಾರಿ ಎಂದೇಕೆ ಭಾವಿಸಬೇಕು? ಸಾವಿರಾರು ವರ್ಷಗಳ ಇಂಥ ಪ್ರಯತ್ನಗಳಲ್ಲಿ ಯಾರೇನು ಸಾಧಿಸಿದ್ದಾರೆ? ವಾಸ್ತವವಾಗಿ ಆಧ್ಯಾತ್ಮಿಕವಾಗಿ ನಾವೆಷ್ಟು ಪ್ರಗತಿ ಸಾಧಿಸಿ ಜೀವನವನ್ನು ಉತ್ತಮಗೊಳಿಸಿಕೊಂಡಿದ್ದೇವೆ? 'ನನಗೆ ಇಸ್ಲಾಂ ಧರ್ಮದಲ್ಲಿ ಆಳವಾದ ಶ್ರದ್ಧೆಯಿದೆ. ಆ ಕಾರಣಕ್ಕೇ ಸತ್ಯಾಗ್ರಹ ಜೀವನ ವಿಧಾನ ಅತ್ಯುತ್ತಮ ಎನಿಸಿದೆ. ಅದು ಹಿಂದೂ ಧರ್ಮವೆಂದು ಮಾತ್ರ ಎನ್ನಿಸಿಯೇ ಇಲ್ಲ' ಎಂದರು.

ಆಂಡ್ರೂಸರು ಕ್ರಿಸ್ತನ ಬೋಧನೆಗಳಾದ ಸತ್ಯ, ಪ್ರೇಮ, ಕರುಣೆಗಳಿಂದ ಪ್ರೇರಿತರಾದವರು. ರವೀಂದ್ರನಾಥ ಟಾಗೋರರ 'ಮಾನವ ಧರ್ಮ'ಎಂಬ ಗ್ರಂಥ ಮತ್ತು 'ಗೀತಾಂಜಲಿ' ಆಂಡ್ರೂಸರ ಮೇಲೆ ಅತ್ಯಂತ ಗಂಭೀರ ಪ್ರಭಾವ ಬೀರಿತ್ತು.

ತಮ್ಮ ಧರ್ಮಾನುಷ್ಠಾನಕ್ಕೆ ನಿಷ್ಕಾಮಕರ್ಮ ಯೋಗವನ್ನೇ ಏಸುವೂ ಪ್ರತಿಪಾದಿಸುತ್ತಾನೆ ಎಂದೇ ಆಂಡ್ರೂಸರ ನಂಬಿಕೆ. ಆದರೆ ಪಾದ್ರಿಗಳಾಗಿ ಎಲ್ಲರನ್ನೂ ಮತಾಂತರಗೊಳಿಸುವುದು, ಅದರಲ್ಲಿ ಆಮಿಷಗಳಿಂದ, ಬಲಾತ್ಕಾರ ಅಥವಾ ಅಧಿಕಾರ ಪ್ರಭಾವದಿಂದ ತನ್ನ ಧರ್ಮ ತ್ಯಜಿಸುವಂತೆ ಮಾಡುವುದು ಸರ್ವಥಾ ಯೋಗ್ಯವಲ್ಲ ಎಂದು ಪ್ರತಿಪಾದಿಸುತ್ತಿದ್ದರು. ಆದರೆ ತನ್ನ ತನ್ನ ಆತ್ಮಸಾಕ್ಷಿಗೆ ಅನುಗುಣವಾಗಿ, ನಂಬಿ ತನ್ನ ಧರ್ಮದ ಅಂತರಾರ್ಥವನ್ನು ಅರಿಯಲಾರದೆ ಬೇರೆ ಧರ್ಮವನ್ನು ಅಂಗೀಕರಿಸುವ ಹಕ್ಕು, ಸ್ವಾತಂತ್ರ್ಯ ಇರಬೇಕು ಎಂದು ಆಂಡ್ರೂಸರ ವಾದ. ಗಾಂಧೀಜೀಯವರಿನ್ನೂ 'ಮಹಾತ್ಮ' ಎಂದು ಜಗತ್ತಿಗೆ ಪರಿಚಯವಿಲ್ಲದಿದ್ದಾಗ, ಅವರ ಸತ್ಯಾಗ್ರಹದ ಅಹಿಂಸಾಧರ್ಮವನ್ನು ಮೆಚ್ಚಿ, ಗಾಂಧೀಯವರು

ಏಸುವಿನ ನಿಜವಾದ ಅನುಯಾಯಿ ಎಂದಿದ್ದರು. ವಿಪರ್ಯಾಸವೆಂದರೆ ಭಾಷಣವನ್ನು ಕೇಳಲು ಗಾಂಧಿಯವರು ಆ ಚರ್ಚಿಗೆ ಬಂದಾಗ ಅವರು ಪರಧರ್ಮದವರು ಎಂದು ಒಳಗೆ ಬಿಡಲೇ ಇಲ್ಲ. ಇದನ್ನು ಆಂಡ್ರೂಸ್ ತಮ್ಮ ಆತ್ಮಕಥೆಯಲ್ಲಿ ವರ್ಣಿಸಿದ್ದಾರೆ.

ಫ್ರಾನ್ಸಿನ ನೋಬೆಲ್ ಪ್ರಶಸ್ತಿ ವಿಜೇತ, ಸಾಹಿತಿ ಸಂತ ರೋಮೇನ್ ರೋಲಾ ಗಾಂಧೀಜೀಯವರ ಜೀವನ ಕಥೆಯನ್ನು ೧೯೨೪ರಲ್ಲೇ ಫ್ರೆಂಚ್ ಭಾಷೆಯಲ್ಲಿ ಬರೆದು ಪ್ರಕಟಿಸಿದರು. ಅದನ್ನು ಇಂಗ್ಲೀಷ್ ಯುವತಿ ಮಿಸ್-ಮ್ಯಾಡಲೀನ್ ಸ್ಲೇಡ್ ಅವರಿಗೆ ಪರಿಚಯಿಸುತ್ತಾ 'ಈ ಗಾಂಧೀಜೀ ಮತ್ತೊಬ್ಬ ಏಸುವಿನ ಅವತಾರ' ಎಂದಿದ್ದರು. ಕುತೂಹಲದಿಂದ ಆ ಗ್ರಂಥವನ್ನೋದಿದ ಮ್ಯಾಡಲೀನ್ ಸ್ಲೇಡ್ ಗಾಂಧೀಜೀಯ ಸಬರಮತಿ ಆಶ್ರಮಕ್ಕೆ ಬಂದು 'ಮೀರಾ ಬಹೆನ್' ಆದರು. ಹಿಂದೂ ಮಹಿಳೆಯಂತೆ ಜೀವಿಸಿದರು. ಆದರೂ ಕ್ರೈಸ್ತಧರ್ಮದ ಶ್ರದ್ಧೆ ಏನೂ ಕಡಿಮೆಯಾಗಲಿಲ್ಲ. ತಮ್ಮ ಆತ್ಮಕಥೆಯನ್ನು 'ಸ್ಪಿರಿಟ್ಸ್ ಪಿಲಿಗ್ರಿಮೇಜ್'ಎಂದೇ ಕರೆದಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿ, ಕೆಂಗೇರಿ ಗುರುಕುಲಾಶ್ರಮದಲ್ಲಿ ಅಮೋಘ ಸೇವೆ ಸಲ್ಲಿಸಿದ ಅಮೇರಿಕದ ರೆವರೆಂಡ್ ಖೈಥಾನ್ ೩೦ರ ದಶಕದಲ್ಲೇ ಭಾರತಕ್ಕೆ ಬಂದು ನೆಲೆಸಿ, ಗಾಂಧೀಜಿಯ ನಿಷ್ಠಾವಂತ ಅನುಯಾಯಿಯಾಗಿ ಬಡವರಲ್ಲಿ ಬಡವರಂತೆ ತಮಿಳ್ನಾಡಿನ ಬಟ್ಲಗುಂಡು ಎಂಬ ಗ್ರಾಮದ ಪುನರ್ ನಿರ್ಮಾಣದ ಕಾರ್ಯಗಳನ್ನು ಕೈಗೊಂಡರು. ಖಾದಿಧಾರಿಗಳಾದರು. ಖಾದಿ ಉತ್ಪಾದನೆ, ಗ್ರಾಮೋದ್ಯೋಗಗಳ ಸ್ಥಾಪನೆ, ಅನ್ನಕಾಯಕದ ಸರಳ ಜೀವನ ಮತ್ತು ರೋಗಿಗಳ ಶುಶ್ರೂಷೆಗಳಿಗಾಗಿ ಒಂದು ದೊಡ್ಡ ಸ್ವಯಂ ಸೇವಕರ ಸೇವಾದಳವನ್ನೇ ನಿರ್ಮಿಸಿದರು.ವಿನೋಬಾರ ಅನುಯಾಯಿಯಾಗಿ ಭೂದಾನ ಚಳುವಳಿಯಲ್ಲಿ ಭಾಗವಹಿಸಿದ್ದರು. ಸರ್ವೋದಯ ಸಮ್ಮೇಳನವೊಂದರ ಅಧ್ಯಕ್ಷರೂ ಆಗಿದ್ದರು. ಅವರು ಕ್ರೈಸ್ತ ಧರ್ಮಾಚರಣೆಯನ್ನು ಅರ್ಥಪೂರ್ಣವಾಗಿ ಅನುಷ್ಠಾನ ಮಾಡಿದರು.

ಜೆ.ಸಿ.ಕುಮಾರಪ್ಪನವರಂತೂ ಭಾರತೀಯ ಕ್ರೈಸ್ತರಾಗಿ ಸಾಂಪ್ರದಾಯಿಕ ಕ್ರೈಸ್ತ ಆಚರಣೆಗಳನ್ನು ನಿರಾಕರಿಸಿ ಏಸುವಿನ ಜೀವನ ತತ್ವಗಳನ್ನು ಅಹಿಂಸಾತ್ಮಕ ಸತ್ಯಾಗ್ರಹಕ್ಕೆ ಅನ್ವಯಿಸಿ ಆಶ್ರಮವಾಸಿಗಳಾದರು. ಅವರು ಬರೆದ 'ಪ್ರಾಕ್ಟೀಸ್ ಅಂಡ್ ಪ್ರಸೆಪ್ಟ್ ಆಫ್ ಜೀಸಸ್' ಎಂಬ ಚಿಕ್ಕ ಪುಸ್ತಕ ಮತಾಂತರ ನಿರತರಾಗಿದ್ದ ಪಾದ್ರಿಗಳಿಗೆ ಒಂದು ಸವಾಲಾಯಿತು.

ಮತ್ತೊಬ್ಬ ಗಾಂಧೀವಾದಿ ಎಸ್.ಕೆ. ಜಾರ್ಜ್ 'ಗಾಂಧೀಸ್ ಛಾಲೆಂಜ್ ಟು ಕ್ರಿಶ್ಚಿಯಾನಿಟಿ' ಎಂಬ ಗ್ರಂಥ ಬರೆದರು. ಸರ್ವ ಧರ್ಮ ಸಮನ್ವಯದಲ್ಲಿ ನಂಬಿಕೆಯುಳ್ಳ ಅನೇಕ ಹಿಂದೂ, ಮುಸ್ಲೀಮ್, ಕ್ರೈಸ್ತ ಬಾಂಧವರು ಸೇರಿ 'ಫೆಲೋಷಿಪ್ ಆಫ್ ದಿ ಫ್ರೆಂಡ್ಸ್ ಆಫ್ ಟ್ರೂತ್' (ಎಫ್.ಎಫ್.ಟಿ.) ಎಂಬ ಸಂಸ್ಥೆ ಸ್ಥಾಪಿಸಿದ್ದರು. ಬೆಂಗಳೂರಿನವರಾದ ಸ್ವಾಮಿ ವಿಶ್ವಾನಂದರು ಅದರ ಕಾರ್ಯದರ್ಶಿ ಆಗಿದ್ದರು.

೧೯೨೭ರಲ್ಲಿ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆಯುತ್ತಾ ಗಾಂಧೀಜೀ 'ಹಿಂದೂಧರ್ಮ ಎನ್ನುವುದು ಒಂದು ಏಕಸೂತ್ರ ರೂಪದ ಧರ್ಮ ಸಂಹಿತೆ ಅಲ್ಲ ಅದರ ಮಾನದಂಡ 'ನಿಷ್ಠುರವಾದ ನಿರ್ಮಲವಾದ ಸತ್ಯನಿಷ್ಠೆ'ಸತ್ಯದ ಒರೆಗಲ್ಲಿಗೆ ಯಾವುದು ನಿಲ್ಲದೋ ಅದನ್ನು ನಿರಾಕರಿಸಬೇಕು.ಯಾವ ಧರ್ಮಾಚರಣೆಯೂ, ಸತ್ಯಕ್ಕೂ, ನೈತಿಕ ನಿಷ್ಠೆಗೂ ದೂರವಾಗಿ ನಿಲ್ಲಲಾರದು. ಅಸ್ಪೃಶ್ಯತೆಯಂತಹ ಕ್ರೂರ ಪದ್ಧತಿ ಸತ್ಯ ಮತ್ತು ನೀತಿಗಳ ಒರೆಗಲ್ಲಿಗೆ ನಿಲ್ಲಲಾರದು. ಧರ್ಮ ಸೂತ್ರಗಳಿಂದ ಇಂಥ ಆಚರಣೆಗಳನ್ನು ಎಷ್ಟೇ ಸಮರ್ಥಿಸಿಕೊಂಡರೂ ನನಗೆ ಅದು ಅಸಂಗತವೆನಿಸುತ್ತದೆ.'

(ಯು.ಇ.೨೯-೯-೧೯೨೭)

ಎಲ್ಲ ಧರ್ಮಗಳೂ ಮಾನವನ ಮೂಲಕವೇ ಆವಿರ್ಭಾವವಾಗಿರುವುದರಿಂದ ಮಾನವನ ಅಪೂರ್ಣತೆಯೂ ಅವುಗಳಲ್ಲಿ ಸೇರಿವೆ. ಪ್ರತಿ ತಲೆಮಾರಿನವರೂ ಹಳೆಯ ಸಾಂಪ್ರದಾಯಿಕ ಶಿಷ್ಟಾಚಾರಗಳನ್ನು ವಿಮರ್ಶಿಸಿ, ಜಳ್ಳನ್ನು ತೂರಿ ಕಾಳನ್ನು ರಕ್ಷಣೆ ಮಾಡಿಕೊಂಡು, ಮೂಲ ತತ್ವಗಳನ್ನು ಬಾಳಿಗೆ ಅನ್ವಯಿಸುವ ಸಾಹಸ ಮಾಡಬೇಕಾದುದು ಅನಿವಾರ್ಯ. ಒಂದು ಕಾಲಕ್ಕೆ 'ಕತ್ತಿಯಿಂದ ನಿನ್ನ ಧರ್ಮವನ್ನು ವಿಸ್ತರಿಸು' ಎಂಬ ಆದೇಶದಿಂದ ಇತರ ಧರ್ಮಗಳ ನಾಶಕ್ಕೆ ಯಾರಾದರು ಹೊರಟಿದ್ದರೆ ಅದು ಇಂದಿನ ವಿಶ್ವಮಾನವ ಸಮಾಜಕ್ಕೆ ಅಸಂಗತ.

* * *

ಜನಪದ ನಿಲಯದ ಅಂತರಂಗದಲ್ಲಿ..೫

-ಸುರೇಂದ್ರ ಕೌಲಗಿ



೧೯೫೯ ನೇ ಇಸವಿ ಜನಪದ ನಿಲಯದ ಅಂತರಂಗದಲ್ಲಿಯ ಜೀವನದಲ್ಲಿ ಒಂದು ಮಹತ್ವದ ವರ್ಷ. ಏಕೆಂದರೆ ಆ ವರ್ಷದಲ್ಲಿ ನಾನು ಮೊದಲ ಬಾರಿಗೆ ಹಿಂದೆ ಇದ್ದ ಹಳೆಯ ಮನೆಯನ್ನು ಪ್ರವೇಶಿಸಿದೆ. ಆಗ ನನಗೆ ಈ ಮನೆಯೇ ಮುಂದೆ ಜನಪದ ಸೇವಾ ಟ್ರಸ್ಟಿನ ಮತ್ತು ಸರ್ವೋದಯ ವಿಚಾರದ ಮುಖ್ಯ ಕೇಂದ್ರವಾಗಿ ರೂಪುಗೊಳ್ಳುತ್ತದೆಂದು ಗೊತ್ತಿರಲಿಲ್ಲ. ವಿನೋಬಾರ ತಮ್ಮ ಭೂದಾನ ಪಾದಯಾತ್ರೆಯ ಅಂಗವಾಗಿ ಮೈಸೂರಿನಲ್ಲಿ ಗ್ರಾಮದಾನ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು ಅದು ಅಖಿಲಭಾರತ ಮಟ್ಟದಲ್ಲಿ ನಡೆದಂತಹ ಸಮ್ಮೇಳನ. ಆ ಸಮ್ಮೇಳನದಲ್ಲಿ ಆಗಿನ ಎಲ್ಲಾ ಮಹತ್ವದ ರಾಷ್ಟ್ರನಾಯಕರು ಭಾಗವಹಿಸಿದ್ದರು. ಆ ಸಮ್ಮೇಳನ ಎಲ್ಲಾ ಪಕ್ಷಗಳ ಸಮ್ಮೇಳನವೂ ಸಹ ಆಗಿತ್ತು. ಆ ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರಲ್ಲಿ ಪಂಡಿತ್ ಜವಹರಲಾಲ್ ನೆಹರು, ಡಾ॥ ರಾಜೇಂದ್ರಪ್ರಸಾದ್ ಜಯಪ್ರಕಾಶ್ ನಾರಾಯಣ್ ಇ.ಎಂ.ಎಸ್.ನಂಬೂದಿರಿಪಾದ್, ಝಡ್.ಎ.ಅಹ್ಮದ್, ಕೆ ಹನುಮಂತಯ್ಯ, ಎಸ್.ನಿಜಲಿಂಗಪ್ಪ ಮುಂತಾದವರಿದ್ದರು. ಇವರೆಲ್ಲರೂ ವಿನೋಬಾರವರ ಸಮ್ಮುಖದಲ್ಲಿ ಭೂದಾನ ಗ್ರಾಮದಾನ ಆಂದೋಲನಕ್ಕೆ ತಮ್ಮ ವೈಚಾರಿಕಹಾಗೂ ನೈತಿಕ ಬೆಂಬಲವನ್ನು ಸೂಚಿಸಿದರು. ಆಗ ಜಯ ಪ್ರಕಾಶ್ ನಾರಾಯಣರ ಜೊತೆಯಲ್ಲಿ ನಾನು ಮೊದಲ ಬಾರಿಗೆ ಹಳೆಯ ಮೈಸೂರು ರಾಜ್ಯಕ್ಕೆ ಭೇಟಿಕೊಟ್ಟದುದು ಅದೇ ಸಮಯದಲ್ಲಿ. ಆಗ ನಾನು ಕರ್ನಾಟಕದಲ್ಲಿ ಎಲ್ಲಿಯಾದರೂ ಹಿಂದುಳಿದ ಯಾವುದಾದರೊಂದು ಗ್ರಾಮದಲ್ಲಿ ನೆಲಸಿ ಸರ್ವೋದಯದ ಕೆಲಸವನ್ನು ಮಾಡಲು ಚಿಂತಿಸುತ್ತಿದ್ದೆ. ನನ್ನ ಈ ಅಭಿಪ್ರಾಯವನ್ನು ಜಯ ಪ್ರಕಾಶರ ಮುಂದೆ ಮಂಡಿಸಿದೆ. ಅವರು ತಮ್ಮ ಒಪ್ಪಿಗೆಯನ್ನು ಕೊಟ್ಟರಲ್ಲದೆ ನನ್ನನ್ನು ವಿನೋಬಾರವರ ಬಳಿಗೆ

ಕರೆದು ಕೊಂಡು ಹೋಗಿ ನಾನು ಹೊಂದಿದ್ದ ಇಚ್ಛೆಯನ್ನು ಅವರಿಗೆ ತಿಳಿಸಿದರು ಅದೇ ಕಾಲಕ್ಕೆ ಕರ್ನಾಟಕದ ಇತರ ಸರ್ವೋದಯ ಕಾರ್ಯಕರ್ತರನ್ನು ಸಹ ಭೇಟಿಮಾಡಿ ನನ್ನ ಇಚ್ಛೆಯನ್ನು ತಿಳಿಸಿದೆ. ಹಲವಾರು ಸ್ಥಳಗಳು ಸೂಚಿಸಲ್ಪಟ್ಟವು. ಅವುಗಳಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯುಸಹ ಒಂದಾಗಿತ್ತು. ಆದರೆ ನಾನು ಮೇಲುಕೋಟೆಯನ್ನು ನೋಡಿರಲಿಲ್ಲ. ಯಾವುದೇ ತೀರ್ಮಾನ ತೆಗೆದುಕೊಳ್ಳುವ ಮುನ್ನ ಗ್ರಾಮವನ್ನು ನೋಡುವುದು ಮತ್ತು ಅಲ್ಲಿಯ ಜನರನ್ನು ಭೇಟಿ ಮಾಡುವುದು ಅಗತ್ಯವೆನಿಸಿತು. ಅದಕ್ಕಾಗಿ ಮೊಟ್ಟ ಮೊದಲ ಬಾರಿಗೆ ಮೇಲುಕೋಟೆಗೆ ಬಂದೆ. ಅಂದಿನ ಆ ದಿನಗಳಲ್ಲಿಯೆ ಕುಟ್ಟಿಯವರು ವಾಸವಾಗಿದ್ದ ಹಳೆಯ ಮನೆಗೆ ಅಂದರೆ ಇಂದಿನ ಜನಪದ ನಿಲಯಕ್ಕೆ ನಾನು ಭೇಟಿಕೊಟ್ಟೆ. ನನ್ನ ಅಭಿಪ್ರಾಯವನ್ನು ಕುಟ್ಟಿಯವರಿಗೂ ಸಹ ತಿಳಿಸಿದೆ. ಅವರು ನನ್ನ ಇಚ್ಛೆಯನ್ನು ಸ್ವಾಗತಿಸಿದರು. ಮತ್ತು ಸಾಧ್ಯವಾದ ಕಾರ್ಯಕ್ರಮಗಳಿಗೆ ತಮ್ಮ ಈ ಮನೆಯನ್ನು ಉಪಯೋಗಿಸಿಕೊಳ್ಳ ಬಹುದೆಂದು ತಿಳಿಸಿದರು. ನನಗೆ ಆಗ ಮೇಲುಕೋಟೆಯಲ್ಲಿರಲು ಸ್ಥಳವೂ ಬೇಕಾಗಿತ್ತು. ಇದನ್ನರಿತ ಕುಟ್ಟಿಯವರು ತಮ್ಮ ಮನೆಯಲ್ಲಿ ವಾಸಿಸಬಹುದೆಂದು ತಿಳಿಸಿದರು. ಈ ಮಾತನ್ನು ಅವರು ತಮ್ಮ ಅಣ್ಣ ದೇಶಿಕಾಚಾರ್ಯರಿಗೂ ತಿಳಿಸಿದರು. ಆ ವೇಳೆಗೆ ನನಗೆ ಮದುವೆಯು ಆಗಿದ್ದರಿಂದ ಕುಟ್ಟಿಯವರ ಮನೆಯಲ್ಲಿ ಬಾಡಿಗೆದಾರನಾಗಿರಲು ಯೋಚಿಸಿದೆ. ಆ ಪ್ರಕಾರವಾಗಿ ದೇಶಿಕಾಚಾರ್ಯರೊಂದಿಗೆ ಮಾತನಾಡಿ ಅಂದಿನ ಜನಪದ ನಿಲಯದ ಹಳೆಯ ಮನೆಯಲ್ಲಿ ಬಾಡಿಗೆದಾರನಾಗಿದ್ದುಕೊಂಡು ಮೇಲುಕೋಟೆ ಗ್ರಾಮದಲ್ಲಿ ಆಗ ನನಗೆ ಸೂಕ್ತವೆನಿಸಿದ ರೀತಿಯಲ್ಲಿ ಗ್ರಾಮಸ್ಥರ ಸಹಕಾರದೊಂದಿಗೆ ಸರ್ವೋದಯ ವಿಚಾರದ ಕೆಲಸಗಳನ್ನು ಮಾಡಲು ತೊಡಗಿದೆ. . . .

(ಮುಂದುವರಿಯುವುದು.)

* * *

ಪುಸ್ತಕ ಪರಿಚಯ

"Free from school"

"ಶಾಲೆಯಿಂದ ಬಿಡುಗಡೆ"

ಲೇಖಕರು: ರಾಹುಲ್ ಆಳ್ವಾರೆಸ್

ಪ್ರಕಾಶಕರು: ಅದರ್ ಇಂಡಿಯಾ ಪ್ರೆಸ್ ಮಾಪುಸಾ ಗೋವಾ

ಪುಟಗಳು ೧೧೧ : ಬೆಲೆ ೧೦೦/-ರೂ

ಪ್ರಕಟಣಾ ವರ್ಷ : ೨೦೦೩

ಪುಸ್ತಕದ ವಿವರ

ಇತ್ತೀಚಿಗೆ ಅನೌಪಚಾರಿಕ ವಿದ್ಯಾಭ್ಯಾಸ ಮತ್ತು ಅನೌಪಚಾರಿಕ ಶಾಲೆ ಇವು ಸಮಾಜದಲ್ಲಿಯ ಅನೇಕ ಶಿಕ್ಷಣ ಪ್ರೇಮಿಗಳ ಗಮನ ಸೆಳೆಯುತ್ತಿದೆ. ಅಂದರೆ ಮುಕ್ತ ವಿದ್ಯಾಭ್ಯಾಸದ ವಿಚಾರ ನಿಧಾನವಾಗಿ ಮಹತ್ವ ಪಡೆಯುತ್ತಿದೆ. ಇಲ್ಲಿ ವಿಚಿತ್ರ ಬೆಳವಣಿಗೆಯೇನೆಂದರೆ ಮುಕ್ತ ವಿದ್ಯಾಭ್ಯಾಸವನ್ನು ಮಕ್ಕಳು ಇಷ್ಟ ಪಡುತ್ತಿದ್ದರೆ, ಪೋಷಕರು ಆ ಪ್ರಕಾರದ ವಿದ್ಯಾಭ್ಯಾಸಕ್ಕೆ ವಿಮುಖರಾಗಿ ನಿಲ್ಲುತ್ತಿದ್ದಾರೆ. ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯ ಚೌಕಟ್ಟಿನಿಂದ ಅವರು ಹೊರ ಬರಲಾಗದವರಾಗಿದ್ದಾರೆ. ಮಕ್ಕಳು ಸಹಜ ಕ್ರಮದಲ್ಲಿ ಶಿಕ್ಷಣ ಪಡೆದು ನಿಜವಾದ ಅರ್ಥದಲ್ಲಿ ಸಮರ್ಥ ವ್ಯಕ್ತಿಗಳಾಗಲು ಇಚ್ಛೆಪಡುತ್ತಾರೆ. ಆದರೆ ಪೋಷಕರು ಪರೀಕ್ಷೆ-ಪ್ರಮಾಣಪತ್ರ-ಮೀಸಲಾತಿ-ಸರ್ಕಾರಿ ಕೆಲಸ ಇತ್ಯಾದಿಗಳ ಭ್ರಮಾಲೋಕದಲ್ಲಿದ್ದಾರೆ. ಮುಕ್ತ ವಿದ್ಯಾಭ್ಯಾಸ-ಮುಕ್ತಶಾಲೆ ಕುರಿತಾಗಿ ಬಹಳಷ್ಟು ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿ ಬರುತ್ತಿದೆ. ಕನ್ನಡದಲ್ಲಿಯೂ ಬರಬೇಕಾಗಿದೆ.

ಸಧ್ಯಕ್ಕಂತೂ ಮುಕ್ತ ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳವರು ಈ ಕುರಿತಾಗಿ ಬಂದಿರುವ ಇಂಗ್ಲಿಷ್ ಸಾಹಿತ್ಯವನ್ನು ಓದಿಯೇ ತಮ್ಮ ಆಸಕ್ತಿಗೆ ಇಂಬು ಕೊಡಬೇಕಾಗಿದೆ. ಇತ್ತೀಚಿಗೆ ಮುಕ್ತ ವಿದ್ಯಾಭ್ಯಾಸ ಕುರಿತಾದ ಅನುಭವಸಿದ್ಧ ಸಾಧನೆ ತಿಳಿಸುವ ಪುಸ್ತಕ ''Free from school' ''ಶಾಲೆಯಿಂದ ಬಿಡುಗಡೆ. ಈ ಪುಸ್ತಕದ ಲೇಖಕ ರಾಹುಲ್ ಆಳ್ವಾರೆಸ್. ಗ್ರಂಥಕರ್ತನ ಪ್ರೋಷಕರು ಈ ರೀತಿ ಹೇಳಿದ್ದಾರೆ ''ಆಧುನಿಕ ಶಿಕ್ಷಣಪದ್ಧತಿ ಹೇರುವ ಒತ್ತಡ ವಿಪುಲವೂ, ಮುಂದುವರಿಯುತ್ತ ಹೋಗುವಂತಹದೂ ಆಗಿರುತ್ತದೆ, ದಶಕಾವಧಿಯಷ್ಟು ದೀರ್ಘಕಾಲದ ಪರೀಕ್ಷಾ ಪದ್ಧತಿ ಮಗುವಿನ ಭುಜದ ಮೇಲೆ ಭಾರವಾಗಿ ಕುಳಿತಿರುತ್ತದೆ. ಮಕ್ಕಳು ಜೀರ್ಣಿಸಿಕೊಳ್ಳಬೇಕಾದ ಮಾಹಿತಿಯ ಪ್ರಮಾಣದ ಬಗ್ಗೆ ಇದುವರೆಗೆ ಯಾರೂ ಕಾರಣಗಳನ್ನು ಕೊಟ್ಟಿಲ್ಲ. ಬಹಳಷ್ಟು ಮಾಹಿತಿ ಅಜೀರ್ಣದಾಯಕವಾಗಿರುತ್ತದೆಂಬುದೂ, ಪರೀಕ್ಷೆಯಲ್ಲಿ ಒಮ್ಮ ಅದನ್ನು ವಾಂತಿ ಮಾಡಿಕೊಂಡಾದ ಮೇಲೆ ಅದನ್ನು ಬಹಳ ಅಚ್ಚುಕಟ್ಟಾಗಿಮರೆಯಲಾಗುತ್ತದೆ.

***

ಫಾರಂ.೪ (ರೂಲ್-೮)

ಪ್ರಕಟಣೆಯ ಸ್ಥಳ	:	ಮೇಲುಕೋಟೆ
ಪ್ರಕಟಣೆಯ ಅವಧಿ	:	ಮಾಹೆಯಾನ
ಮುದ್ರಕರ ಹೆಸರು	:	ಎಲ್.ಬಾಲಕೃಷ್ಣ
ಭಾರತದ ಪ್ರಜೆಯೆ	:	ಹೌದು
ವಿಳಾಸ	:	ಇಂದೀವರ ಪ್ರಿಂಟರ್ಸ್ ಸಂತೇ ಬೀದಿ, ನಾಗಮಂಗಲ.
ಪ್ರಕಾಶಕರ ಹೆಸರು	:	ಸುರೇಂದ್ರ ಕೌಲಗಿ
ಭಾರತದ ಪ್ರಜೆಯೆ	:	ಹೌದು
ವಿಳಾಸ	:	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ, ಮೇಲುಕೋಟೆ-೫೭೧೪೩೧ ಮಂಡ್ಯ ಜಿಲ್ಲಾ.
ಸಂಪಾದಕರ ಹೆಸರು	:	ಸುರೇಂದ್ರ ಕೌಲಗಿ
ಭಾರತದ ಪ್ರಜೆಯೆ	:	ಹೌದು
ವಿಳಾಸ	:	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ, ಮೇಲುಕೋಟೆ-೫೭೧೪೩೧ ಮಂಡ್ಯ ಜಿಲ್ಲಾ.
ಮಾಲೀಕರ ಹೆಸರು ಮತ್ತು ವಿಳಾಸ	:	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ, ಮೇಲುಕೋಟೆ-೫೭೧೪೩೧ ಮಂಡ್ಯ ಜಿಲ್ಲಾ.

ಈ ಕೆಳಗೆ ರುಜು ಮಾಡಿರುವ ಸುರೇಂದ್ರ ಕೌಲಗಿ ಆದ ನಾನು ಮೇಲೆ ತಿಳಿಸಲಾದ ವಿವರಗಳು ನಮಗೆ ತಿಳಿದ ಮಟ್ಟಿಗೆ ಸತ್ಯ.

ದಿನಾಂಕ : ೦೨-೨೦೦೪
ಸ್ಥಳ : ಮೇಲುಕೋಟೆ

ಸುರೇಂದ್ರ ಕೌಲಗಿ
(ಪ್ರಕಾಶಕರ ರುಜು)

KA-SKMND-470-2003-05
Regd. no. KAR/KAN/2000/3820

ತೆರೆದ-ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com